1941
1684

ಶಿವಾನುಭವ ಗ್ರಂಥಮಾಲಾ ನಂ. ೫೭

# ಹರಳಯ್ಯನ ತ್ರಿಪದಿ.

ಸಂಪಾದಕರು

ಡಾ॥ ಬ॥ ಫ. ಗು. ಹಳಕಟ್ಟಿ

ಬಿ. ಏ. ಎಲ್. ಎಲ್. ಬಿ.

ವಿಜಾಪುರ

—×—

033:152
Har
7987

೧೯೪೧

ಬೆಲೆ— [illegible] —೦

VIJAY COLLEGE LIBRARY
BIJAPUR.
(BOOK-FLAP)
AN° 7987
7987

N° 2166
AN° 7987
KB 535

ಶಿವಾನುಭವ ಗ್ರಂಥಮಾಲಾ ನಂ. ೫೭

# ಹರಳಯ್ಯನ ತ್ರಿಪದಿ.

033:152
Har
7987

ಸಂಪಾದಕರು

**ರಾ॥ ಬ॥ ಫ. ಗು. ಹಳಕಟ್ಟಿ**

ಬಿ. ಏ. ಎಲ್. ಎಲ್. ಬಿ.

ವಿಜಾಪುರ

The Vijay College
LIBRARY
VIJAY COLLEGE.
BIJAPUR.

೧೯೪೧

(ಈ ಗ್ರಂಥದ ಎಲ್ಲ ಹಕ್ಕುಗಳು ಗ್ರಂಥಕರ್ತರಿಂದ ಕಾಯ್ದಿಡಲಾಗಿವೆ.)

7987

ಇದನ್ನು ವಿಜಾಪುರದಲ್ಲಿ ರಾ॥ ಬ॥ ಫ. ಗು. ಹಳಕಟ್ಟಿ ಇವರು ತಮ್ಮ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ಉಪಲೀಬುರುಜದ ಹತ್ತರ ತಮ್ಮ ೧೬೨೦ (ಅ)ನೇ ಮನೆಯಲ್ಲಿ ಪ್ರಕಟಿಸಿದರು.

The Vi... LIBRARY ... BIJAPUR

## ಪ್ರಸ್ತಾವನೆ.

ಸ್ಪೃಶ್ಯಾಸ್ಪೃಶ್ಯ ಭಾವವು ವೀರಶೈವ ಧರ್ಮದಲ್ಲಿರುವದಿಲ್ಲ. ವೀರಶೈವ ಸಮಾಜದಲ್ಲಿ ಆಗಿಹೋಗಿರುವ ತತ್ವಜ್ಞಾನಿಗಳೂ, ಶರಣರೂ, ಸಾಧುಗಳೂ, ವಚನಕಾರರೂ ಅಸ್ಪೃಶ್ಯತೆಯನ್ನು ಎಲ್ಲಿಯೂ ಒಪ್ಪಿರುವದಿಲ್ಲ. ಅವರಲ್ಲಿ ಮುಖ್ಯವಾಗಿ ವಚನಕಾರರು ಬಹು ಸ್ಪಷ್ಟ ಶಬ್ದಗಳಿಂದ ಇದನ್ನು ಖಂಡಿಸಿದ್ದಾರೆ. ಈ ಬಗ್ಗೆ ಅವರ ಉಕ್ತಿಗಳು ಅಸಂಖ್ಯವಾಗಿರುತ್ತವೆ. ವೀರಶೈವ ಧರ್ಮವು ಪಂಚಸೂತಕಗಳನ್ನು ಎಣಿಸುವದಿಲ್ಲ. ಜನನಸೂತಕ, ಪ್ರೇತಸೂತಕ, ಉಚ್ಛಿಷ್ಟಸೂತಕ, ರಜಸೂತಕ, ಜಾತಿಸೂತಕ ಇವುಗಳೇ ಈ ಪಂಚಸೂತಕಗಳಾಗಿದ್ದು ಇವುಗಳಲ್ಲಿ ಜಾತಿಸೂತಕವಿರುವದರಿಂದ ವೀರಶೈವರು ಇದನ್ನು ಮನ್ನಿಸಿರುವದಿಲ್ಲ. ಯಾರು ವೀರಶೈವ ಧರ್ಮದ ತತ್ವಗಳನ್ನು ಒಪ್ಪಿ ಅವುಗಳಂತೆ ಆಚರಿಸುತ್ತಾರೋ ಅವರು ಯಾವ ಕಾಯಕವನ್ನು ಮಾಡುತ್ತಿದ್ದರೂ ಕೂಡ ಅವರಲ್ಲಿ ಯಾವತೆರದ ಭೇದವನ್ನು ಎಣಿಸಕೂಡದೆಂದು ವೀರಶೈವ ಮತವಿರುವದರಿಂದ ಅಸ್ಪೃಶ್ಯತೆಯನ್ನು ವೀರಶೈವ ಶಿವಶರಣರು ಎಂದಿನಿಂದಲೂ ನಿಷೇಧಿಸುತ್ತ ಬಂದಿರುತ್ತಾರೆ ಮತ್ತು ಅವರು ಹಾಗೆ ಒಂದು ಕಾಲದಲ್ಲಿ ನಡೆದೂ ತೋರಿಸಿರುತ್ತಾರೆ. ಇದು ಮುಂದೆ ಹೇಳಿದ ಸಂಗತಿಗಳಿಂದ ಗೊತ್ತಾಗುವದು.

ಯಾವನು ವೀರಶೈವ ಧರ್ಮದ ತತ್ವಗಳನ್ನು ತಿಳಿದುಕೊಂಡು ಅವುಗಳಂತೆ ಆಚರಿಸುತ್ತಾನೋ ಅವನು ಲಿಂಗಧಾರಣೆಗೆ ಯೋಗ್ಯನಾಗುತ್ತಾನೆ. ಲಿಂಗಧಾರಣೆಯು ವೀರಶೈವಾಚಾರಣೆಯಂತೆ ನಡಿಯಲು ಒಪ್ಪಿಗೆ ಕೊಟ್ಟದ್ದರ ಒಂದು ಕುರುಹೆಂದು ಹೇಳಬಹುದು. ಹೀಗೆ ಒಪ್ಪಿಕೊಂಡು ಷಟ್‌ಸ್ಥಲಶಾಸ್ತ್ರದ ತತ್ವಗಳನ್ನು ಅರಿತು ಆಚರಿಸಿದಲ್ಲಿ ಅಂಥ ಭಕ್ತನ ಅಂಗ ಮನ ಪ್ರಾಣಗಳಲ್ಲಿ ಲಿಂಗದ ಕಳೆಯು ದೃಢಪಡುತ್ತ ಹೋಗುತ್ತದೆ. ಅಂಥವನು ಪರಮಾತ್ಮನ ವಾಸ ಭೂಮಿ ಎಂದು ವಚನಕಾರರ ಅಭಿಪ್ರಾಯವಿದೆ. ಆದ್ದರಿಂದ ಭಕ್ತನ ಶರೀರವು ದೇವಾಲಯದಂತೆ ಪವಿತ್ರವಾದುದೆಂದು ಅವರ ಉಕ್ತಿಗಳಿವೆ. ಇಂಥ ಪವಿತ್ರ ಸ್ಥಾನದಲ್ಲಿ ಯಾವ ತೆರದ ಉಚ್ಚನೀಚ ಭಾವವನ್ನು ಕಲ್ಪಿಸಕೂಡದು. ಅಲ್ಲಿ ಜಾತಿಭೇದದ

ಕಲ್ಪನೆಗಳು ಎಷ್ಟುಮಾತ್ರವೂ ಇರಕೂಡದು. ಈ ತತ್ವಕ್ಕನುಸರಿಸಿ ವೀರಶೈವ ಧರ್ಮದಲ್ಲಿ ಅಸ್ಪೃಶ್ಯತ್ವವಿರುವದಿಲ್ಲ.

ವಚನಕಾರರ ಈ ತತ್ವಗಳು ವೀರಶೈವ ಸಮಾಜದಲ್ಲಿ ರೂಢವಿರುವವರೆಗೆ ಅದು ದೇಶದಲ್ಲಿ ಪ್ರಸಾರವಾಗುತ್ತಲೇ ನಡಿಯಿತು. ಇದರಿಂದ ಅಸ್ಪೃಶ್ಯ ಮೊದಲ್ಗೊಂಡು ಎಲ್ಲ ಸಮಾಜಗಳು ಅದರಲ್ಲಿ ಸೇರ್ಪಡೆಯಾದವು. ಈ ಸ್ಥಿತಿಯು ಕ್ರಿ. ಶ. ೧೧೦೦ ರಿಂದ ೧೪೦೦ ಇಸ್ವಿಯವರೆಗೆ ಅಂದರೆ ಸುಮಾರು ೩೦೦ ವರ್ಷಗಳ ವರೆಗೆ ನಡೆಯಿತು. ಈ ಕಾಲದಲ್ಲಿ ಅಸಂಖ್ಯ ವಚನಕಾರರು ದೇಶದಲ್ಲಿ ಉದ್ಭವಿಸಿದರು. ಅವರೆಲ್ಲರೂ ಅಸ್ಪೃಶ್ಯತ್ವವನ್ನು ನಿಷೇಧಿಸಿದ್ದಾರೆ. ಅವರು ಹೀಗೆ ನಿಷೇಧಿಸಿದ್ದಲ್ಲದೆ, ಅದರಂತೆ ಅವರು ಆಚರಿಸಿಯೂ ಇದ್ದಾರೆ. ಇದರಿಂದ ಆಗಿನ ಅಸ್ಪೃಶ್ಯ ಸಮಾಜಗಳಲ್ಲಿ ಅನೇಕ ಸಾಧುಗಳೂ ಸತ್ಪುರುಷರೂ ಆಗಿಹೋದರು. ಅಂಥವರಲ್ಲಿ ಕೆಲವರನ್ನು ಮಾತ್ರ ನಾವು ಇಲ್ಲಿ ನಿರ್ದೇಶಿಸುತ್ತೇವೆ.

ಅಸ್ಪೃಶ್ಯ ಸಮಾಜದಲ್ಲಿ ಆಗಿಹೋದ ಮಹಾಪುರುಷರಲ್ಲಿ ಮಾದರ ಚನ್ನಯ್ಯನು ಉಚ್ಚ ಸ್ಥಾನವನ್ನು ಹೊಂದಿರುತ್ತಾನೆ. ಅವನು ಬಸವೇಶ್ವರನಕಿಂತಲೂ ಮೊದಲಿನವನು. ಬಸವೇಶ್ವರನು ತನ್ನ ವಚನಗಳಲ್ಲಿ ಅವನ ವಿಷಯವಾಗಿ ಆಗಿಂದಾಗ್ಗೆ ಉಲ್ಲೇಖಿಸುತ್ತಾನೆ. ಚನ್ನಯ್ಯನ ಕೆಲವು ವಚನಗಳೂ ಇರುತ್ತವೆ. ಅವನು ಮೊದಲು ಕರ್ನಾಟಕದಲ್ಲಿ ವಾಸವಾಗಿದ್ದು ಮುಂದೆ ದಕ್ಷಿಣದಲ್ಲಿ ಚೋಳದೇಶಕ್ಕೆ ಹೋದನೆಂದು ತೋರುತ್ತದೆ. ಅಲ್ಲಿ ಅವನು ಹುಲ್ಲು ಮಾಡಿ ಚೋಳ ರಾಜನಲ್ಲಿ ಅದನ್ನು ಹಾಕಿ ಅದರಿಂದ ಬಂದ ಹಣದಿಂದ ತನ್ನ ಉಪಜೀವನವನ್ನು ಸಾಗಿಸುತ್ತಿದ್ದನು. ಅವನು ಗುಪ್ತಭಕ್ತಿಯುಳ್ಳವನಾಗಿ ತಾನು ದುಡಿದದ್ದನ್ನೆಲ್ಲ ಪರಮಾತ್ಮನಿಗೆ ಅರ್ಪಿಸಿ ಪ್ರಸಾದರೂಪವಾಗಿ ಅನ್ನಗ್ರಹಣ ಮಾಡುತ್ತಿದ್ದನು. ಪರಮಾತ್ಮನು ಅವನ ಭಕ್ತಿಗೆ ಮೆಚ್ಚಿ ಅವನೊಡನೆಯೇ ಅನ್ನ ಸೇವನೆ ಮಾಡುತ್ತಿದ್ದನು. ಚೋಳರಾಜನಿಗೆ ಈ ಸಂಗತಿಯು ತಿಳಿಯಲು ಅವನು ಚನ್ನಯ್ಯನನ್ನು ಕಂಡು ಅವನನ್ನು ಸತ್ಕರಿಸಿ ಮನ್ನಿಸಿದನೆಂದು ಇವನ ಚರಿತ್ರೆ ಇದೆ. ಮಹಾಕವಿಯಾದ ಹರಿಹರನು ಇವನ ವಿಷಯವಾಗಿ ಒಂದು ಬಹು ಸುಂದರವಾದ ರಗಳೆಯನ್ನು ರಚಿಸಿದ್ದಾನೆ. (ಹರಿಹರನ ರಗಳೆಗಳು ಭಾಗ ೧ ನೋಡಿರಿ.)



ಶ್ವಪಚಯ್ಯನೆಂಬವನು ಇನ್ನೊಬ್ಬ ಅಸ್ಪೃಶ್ಯ ಮಹಾಪುರುಷನಿದ್ದಾನೆ. ಅವನಿದ್ದ ಛತ್ತೀಸಪುರ ಎಂಬ ಗ್ರಾಮದಲ್ಲಿ ಸಾಮವೇದಿ ಎಂಬ ಒಬ್ಬ ಪ್ರಸಿದ್ಧ ಬ್ರಾಹ್ಮಣ ಪಂಡಿತನಿದ್ದು ಅವನು ತನ್ನ ಯೋಗಾಭ್ಯಾಸದ ಬಲದಿಂದ ಆಕಾಶ ಗಮನ ಮಾಡುವ ಸಾಮರ್ಥ್ಯವನ್ನು ಹೊಂದಿದವನಾಗಿದ್ದನು. ಅವನು ಒಂದು ದಿವಸ ಆಕಾಶ ಮಾರ್ಗದಿಂದ ಹೋಗುತ್ತಿರಲು ಕೆಳಗೆ ಶ್ವಪಚನು ಒಂದು ತಲೆಬುರುಡೆಯಲ್ಲಿ ತನ್ನ ಆಹಾರವನ್ನಿಟ್ಟುಕೊಂಡು ಭುಂಜಿಸುತ್ತಾ ಇದ್ದನು. ಆಗ ಶ್ವಪಚನು ಆಕಾಶಮಾರ್ಗದಿಂದ ಹೋಗುತ್ತಿದ್ದ ಸಾಮವೇದಿಯ ದೃಷ್ಟಿಯು ಪರಮಾತ್ಮನಿಗೆ ಅರ್ಪಣವಾದ ತನ್ನ ಆಹಾರದಲ್ಲಿ ಬೀಳಬಾರದೆಂದು ಅದನ್ನು ಕೆರಹದಿಂದ ಮುಚ್ಚಿದನು. ಸಾಮವೇದಿಯು ಅದನ್ನು ನೋಡಿ ಬೆರಗಾಗಿ ಗಗನದಿಂದ ಕೆಳಗಿಳಿದು ಹೀಗೇಕೆ ವರ್ತಿಸಿದೆ ಎಂದು ಶ್ವಪಚಯ್ಯನನ್ನು ಕೇಳಲು ಅವನು ಅದಕ್ಕೆ, ಸಾಮವೇದಿಯು ಒಬ್ಬ ಭವಿ ಎಂದು ಭಾವಿಸಿ ಉತ್ತರವನ್ನು ಕೊಡದಿರಲು ಸಾಮವೇದಿಯು ತನ್ನ ಗ್ರಾಮಕ್ಕೆ ಹೊರಟು ಹೋದನು. ಆದರೆ ಪರಮಾತ್ಮನು ಸಾಮವೇದಿಯ ಕನಸಿನಲ್ಲಿ ಬಂದು ಶ್ವಪಚನೆಂದರೆ ಸಾಮಾನ್ಯನಲ್ಲ, ಅವನು ನಾನೆಂದೇ ಭಾವಿಸಿ ಅವನನ್ನು ಪುನಃ ಕಾಣು ಎಂದು ತಿಳಿಸಿ, ಹಾಗೆಯೇ ಅವನು ಶ್ವಪಚನ ಕನಸಿನಲ್ಲಿ ಬಂದು ಸಾಮವೇದಿಗೆ ಉಪದೇಶವನ್ನು ಮಾಡಿ ಅವನ ಭವಿತನವನ್ನು ಕಳೆ ಎಂದು ಹೇಳಿದನು. ಆಗ ಸಾಮವೇದಿಯು ಮರುದಿನ ಶ್ವಪಚಯ್ಯನನ್ನು ಕಂಡು ಅವನಿಂದ ಬೋಧೆಯನ್ನು ಹೊಂದಿ ಶಿವದೀಕ್ಷೆಯನ್ನು ಪಡೆದನು. ಆಗ ಛತ್ತೀಸಪುರದಲ್ಲಿದ್ದ ಸಾಮವೇದಿಯೂ ಅವನ ಶಿಷ್ಯರೂ ದೀಕ್ಷೆಯನ್ನು ಹೊಂದಿದರು. ಈ ಯಾವತ್ತು ವಿಷಯಗಳನ್ನು ಹರಿಹರನು ತನ್ನ ರಗಳೆಯಲ್ಲಿ ಬಹು ಸುಂದರವಾಗಿ ವರ್ಣಿಸಿದ್ದಾನೆ. (ಹರಿಹರನ ರಗಳೆಗಳು ಭಾಗ ೫ ನೋಡಿರಿ.)

ಭೋಗಣ್ಣನೆಂಬ ಇನ್ನೊಬ್ಬ ಶಿವಶರಣನು ಕಲಬುರ್ಗಿ ಜಿಲ್ಲೆಯಲ್ಲಿರುವ ಕೆಂಭಾವಿಯಲ್ಲಿದ್ದನು. ಇವನು ಬ್ರಾಹ್ಮಣ ಕುಲದವನು. ಒಂದು ದಿನ ಒಬ್ಬ ಅಸ್ಪೃಶ್ಯನು ಹೆಗಲ ಮೇಲೆ ಮಿಣಿ, ಕೈಯ್ಯಲ್ಲಿ ಸಂಬಲಿಗೋಲು ಹಿಡಿದುಕೊಂಡು ಅವನ ಗೃಹವನ್ನು ಪ್ರವೇಶಿಸಲು, ಅವನು ಕೇವಲ ಶಿವಭಕ್ತನೆಂಬುದನ್ನು ಭೋಗಯ್ಯನು ತಿಳಿದು ಅವನನ್ನು ಉಪಚರಿಸಿದನು. ಆಗ ಆ ಗ್ರಾಮದ ವಿಪ್ರರು ಅವನ ವಿಷಯವಾಗಿ ತಮ್ಮ

ರಾಜನಲ್ಲಿ ದೂರು ಹೇಳಲು, ರಾಜನು ಗ್ರಾಮವನ್ನು ಬಿಟ್ಟು ಹೊರ ಹೊರಡಲು ಭೋಗಯ್ಯನಿಗೆ ಆಜ್ಞಾಪಿಸಿದನು. ಆಗ ಅವನು ಪುರವನ್ನು ಬಿಟ್ಟು ಹೋಗಲು ಅಲ್ಲಿಯ ದೇವಾಲಯಗಳಲ್ಲಿದ್ದ ಎಲ್ಲ ಲಿಂಗಗಳು ಅವನ ಬೆನ್ನುಹತ್ತಿ ಹೋದವು. ಮರುದಿನ ಬ್ರಾಹ್ಮಣರು ಪೂಜೆಗೋಸ್ಕರ ದೇವಾಲಯಗಳನ್ನು ಪ್ರವೇಶಿಸಲು ಅಲ್ಲಿ ಬರೇ ಪೀಠಗಳಿದ್ದದ್ದನ್ನು ಕಂಡು ಬೆರಗಾಗಿ, ಇದು ಭೋಗಯ್ಯನ ಮಹಿಮೆ ಎಂದು ತಿಳಿದು ಅವನನ್ನು ಮನ್ನಿಸಿ ಪಟ್ಟಣಕ್ಕೆ ಬರಮಾಡಿಕೊಂಡು ಅವನನ್ನು ಹೆಚ್ಚಾಗಿ ಮನ್ನಿಸುವವರಾದರು.

ಮೇಲೆ ಹೇಳಿದ ಮೂವರೂ ಅಸ್ಪೃಶ್ಯ ಶಿವಶರಣರು ಬಸವೇಶ್ವರನಕಿಂತಲೂ ಹಿಂದಿನವರು. ಆದರೆ ಬಸವೇಶ್ವರನ ಕಾಲಕ್ಕೂ ಅನೇಕ ಅಸ್ಪೃಶ್ಯ ಮಹಿಮರೂ ಉದ್ಭವಿಸಿ ಅವನಿಂದ ಮನ್ನಣೆಯನ್ನು ಹೊಂದಿದ್ದಾರೆ. ಅವರಲ್ಲಿ ಕಕ್ಕಯ್ಯ, ಶಿವನಾಗಮಯ್ಯ ಮತ್ತು ಹರಳಯ್ಯ ಇವರು ಮುಖ್ಯರಾಗಿದ್ದಾರೆ. ಕಕ್ಕಯ್ಯನು ಢೋರರವನು. ಅವನು ಶಿವಾನುಭವ ಮಂಟಪದಲ್ಲಿ ಸೇರ್ಪಡೆಯಾಗಿ ಅಲ್ಲಿಯ ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧನಾದನು. ಅವರೆಲ್ಲರು ಅವನ ಪ್ರಸಾದವನ್ನು ಸ್ವೀಕರಿಸುವವರಾಗಿದ್ದರು. ಆ ಕಾಲದಲ್ಲಿ ಎಲ್ಲರೂ ಶುಚಿರ್ಭೂತರಾಗಿ ಶಿವಶರಣರ ಮತದಂತೆ ಆಚರಿಸುವವರಾದ್ದರಿಂದ ಸ್ಪೃಶ್ಯಾಸ್ಪೃಶ್ಯ ಭೇದಗಳು ಅಥವಾ ಜಾತಿ ವಿಷಯಕ ವಿಚಾರಗಳು ಶಿವಾನುಭವ ಮಂಟಪದಲ್ಲಿ ತಲೆದೋರಲಿಲ್ಲ.

ಶಿವನಾಗಮಯ್ಯನೆಂಬ ಇನ್ನೊಬ್ಬ ಅಸ್ಪೃಶ್ಯ ಶಿವಶರಣನು ಬಸವೇಶ್ವರನಲ್ಲಿ ಇರುತ್ತಿರಲು, ಅವನ ಮಹತ್ವವನ್ನು ತೋರಿಸುವ ಅಪೇಕ್ಷೆಯಿಂದ ಬಸವೇಶ್ವರನು ಅವನ ಕಯ್ಯನ್ನು ಹಿಡಿದು ಮೆಲ್ಲನೆ ಒತ್ತುತ್ತಿರಲು ಅದರೊಳಗಿಂದ ಹಾಲು ಸುರಿಯಹತ್ತಿತು.

ಈ ಯಾವತ್ತೂ ಕಥೆಗಳ ಮುಖ್ಯ ಭಾವವು ಆಚಾರವಂತರಾದ ಅಸ್ಪೃಶ್ಯ ಶಿವಭಕ್ತರು ಉಳಿದ ಯಾವ ಭಕ್ತರಿಗಿಂತಲೂ ಕಡಿಮೆಯವರಲ್ಲ, ಅವರಲ್ಲಿ ಯಾವ ತರದ ಭೇದಭಾವವನ್ನು ಕಲ್ಪಿಸಕೂಡದು, ಇಷ್ಟೇ ಅಲ್ಲ, ಅವರೊಡನೆ ಅನ್ನ ಗ್ರಹಣ ಮೊದಲಾದ ಎಲ್ಲ ತರದ ಬಳಿಕೆಯನ್ನು ಸಹ ಮಾಡಲು ಸಂಕೋಚವಿರಕೂಡದು ಎಂಬುದು ವ್ಯಕ್ತವಾಗುತ್ತದೆ.



ಈಗಿನ ಪುಸ್ತಕದಲ್ಲಿ ಹರಳಯ್ಯ ಮಧುವರಸರ ಕಥೆಯು ನಿರೂಪಿಸಲ್ಪಟ್ಟಿರುತ್ತದೆ. ಈ ಉಭಯತರಲ್ಲಿ ಮಧುವರಸನು ಜಾತಿಯಿಂದ ಬ್ರಾಹ್ಮಣನಿದ್ದು ಬಿಜ್ಜಳನ ಕಾಲದಲ್ಲಿ ಒಂದು ಶ್ರೇಷ್ಠತರದ ಅಧಿಕಾರ ಸ್ಥಾನವನ್ನು ಪಡೆದಿದ್ದನು. ಹರಳಯ್ಯನು ಮೆಚ್ಚೆಗಳನ್ನು ಮಾಡುವ ಕಾಯಕವನ್ನು ಮಾಡುತ್ತಿದ್ದು ಬಸವೇಶ್ವರನು ಅವನ ಭಕ್ತಿಗೆ ಮೆಚ್ಚಿದವನಾಗಿದ್ದನು. ಒಂದು ದಿನ ಬಸವೇಶ್ವರನು ರಾಜಮಾರ್ಗದಿಂದ ಹೋಗುತ್ತಿರಲು ಅವನು ತನ್ನ ಇದಿರಿಗೆ ಹರಳಯ್ಯನನ್ನು ಕಂಡು ಅವನಿಗೆ "ಶರಣು" ಎಂದು ನಮಸ್ಕಾರ ಮಾಡಿ ಮುಂದೆಸಾಗಿದನು. ಹರಳಯ್ಯನು ರಾಜನ ಮಂತ್ರಿಯಿಂದ ಹೀಗೆ ಶರಣೆಂದು ಹೇಳಿಸಿಕೊಂಡದ್ದು ತನ್ನ ಮಹತ್ಪಾಪವೆಂದು ಭಾವಿಸಿ ಇದನ್ನು ದೂರ ಮಾಡುವದಕ್ಕೋಸ್ಕರ ಬಹು ಶ್ರಮಪಟ್ಟು ಅವನಿಗೊಂದು ಮೆಚ್ಚೆಯ ಜೋಡನ್ನು ಸಿದ್ಧಪಡಿಸಿ ಶಿವಾನುಭವ ಮಂಟಪಕ್ಕೆ ಹೋಗಿ ಬಸವೇಶ್ವರನಿಗೆ ಒಪ್ಪಿಸಿದನು. ಆಗ ಬಸವೇಶ್ವರನು ಒಬ್ಬ ಶಿವಾನುಭವಿಯ ಕೈಯಿಂದಾದ ಜೋಡನ್ನು ಹೀಗೆ ತಾನು ಮೆಟ್ಟುವದು ಉಚಿತವಾದುದಲ್ಲವೆಂದು ತಿಳಿದು ಅವುಗಳನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ. ಮುಂದೆ ಹರಳಯ್ಯನು ಅಲ್ಲಿಂದ ತೆರಳಿ ರಾಜಮಾರ್ಗದಿಂದ ಬರುತ್ತಿರಲು ದಾರಿಯಲ್ಲಿ ಮಧುವರಸನು ಅವನನ್ನು ಕಂಡು ಅವನ ಕೈಯ್ಯಲ್ಲಿದ್ದ ಆ ಸುಂದರವಾದ ಜೋಡನ್ನು ಬಲಾತ್ಕಾರದಿಂದ ಕಸೆದುಕೊಂಡು ಹೋದನು. ಹೀಗೆ ಒಬ್ಬ ಶಿವಶರಣನ ಮನಸ್ಸಿಗೆ ಒಪ್ಪಿಗೆ ಇರದಂಥ ಕಾರ್ಯವನ್ನು ಮಧುವರಸನು ಮಾಡಲಾಗಿ ಅವನಿಗೆ ಕುಷ್ಠರೋಗವು ಉಂಟಾಗಿ ಅದರಿಂದ ಅವನು ಬಹಳ ತಾಪವನ್ನು ಹೊಂದಹತ್ತಿದನು. ಒಂದು ದಿನ ಅವನ ಸ್ನಾನದ ನೀರು ಬಹಳ ಕುದಿಯುತ್ತಿರಲು ಅದರಲ್ಲಿ ಸುರಿಯುವದಕ್ಕೋಸ್ಕರ ಬಾವಿಯಿಂದ ನೀರನ್ನು ಬೇಗನೆ ತರಲು ದಾಸಿಯೊಬ್ಬಳನ್ನು ಮನೆಯವರು ಕಳುಹಿಸಲು ಅವಳು ದಾರಿಯಲ್ಲಿ ಬಿರುಗಾಳಿ ಬಿಟ್ಟು ಮಳೆ ಚಿನ್ಹ ತೋರಿದ್ದರಿಂದ ದೂರದಲ್ಲಿದ್ದ ಬಾವಿಗೆ ಹೋಗದೆ ನೆರೆಯಲ್ಲಿದ್ದ ಹರಳಯ್ಯನ ಬಚ್ಚಲ ಗುಂಡಿಯಲ್ಲಿ ನಿಂತಿದ್ದ ನೀರನ್ನೇ ತಂದು ಆ ಬಿಸಿನೀರಲ್ಲಿ ಹಾಕಿಬಿಟ್ಟಳು. ಆ ನೀರಿನಿಂದ ಮಧುವರಸನು ಸ್ನಾನ ಮಾಡಲು ಅವನ ಮೆಯ್ಯಲ್ಲಿದ್ದ ಜೇಗೆ ಎಲ್ಲವು ಹೊರಟು ಹೋಗಿ ಅವನ ಕುಷ್ಠ ರೋಗವು ವಾಸಿಯಾಯಿತು. ಹೀಗೇಕಾಯಿತೆಂಬುದು ಮಧುವರಸನಿಗೆ ತಿಳಿಯಲಾಗಿ ಹರಳಯ್ಯನಿಗೋಸ್ಕರ ಅತ್ಯಂತ ಭಕ್ತಿಭಾವವನ್ನು ಅವನು ವಹಿಸಿದವನಾಗಿ ವೀರ

ಶೈವ ದೀಕ್ಷೆಯನ್ನು ಹೊಂದಿದನು. ಇಷ್ಟೇ ಅಲ್ಲ, ಅವನ ಮಗನಿಗೆ ತನ್ನ ಮಗಳನ್ನು ಸಹ ಕೊಟ್ಟು ಲಗ್ನ ಮಾಡಿದನು. ಹೀಗೆ ಮಧುವರಸನು ಲಗ್ನ ಮಾಡಿದ್ದಕ್ಕೋಸ್ಕರ ಕಲ್ಯಾಣ ಪಟ್ಟಣದಲ್ಲಿಯ ದ್ವಿಜರು ಬಿಜ್ಜಳರಾಯನಲ್ಲಿಗೆ ಹೋಗಿ ದೂರಲಾಗಿ, ಬಿಜ್ಜಳನು ಬಸವೇಶ್ವರನನ್ನು ಕರಿಸಿ ಹೀಗೆ ಶಿವಶರಣರು ನಡೆಯಬಹುದೇ ಎಂದು ಕೇಳಲಾಗಿ ಬಸವೇಶ್ವರನು ಶಿವಶರಣರಲ್ಲಿ ಕುಲಸೂತಕವನ್ನು ಎಣಿಸಕೂಡದೆಂದು ನುಡಿದನು. ಆದರೆ ಬಿಜ್ಜಳನು ಇದನ್ನು ಮನ್ನಿಸದೆ, ಹರಳಯ್ಯ - ಮಧುವರಸರನ್ನು ಕರಿಸಿ ಅವರಿಬ್ಬರನ್ನು ಶೂಲದ ಮೇಲೆ ಕುಳ್ಳಿರಿಸಿ ವಧಿಸಿದನು.

ಬಿಜ್ಜಳನ ಈ ವರ್ತನೆಯನ್ನು ಕಂಡು ಕಲ್ಯಾಣದಲ್ಲಿದ್ದ ಶಿವಶರಣರೆಲ್ಲರೂ ಸಂತಾಪಿಸಿದರು. ಬಸವೇಶ್ವರನು ಇನ್ನು ಮುಂದೆ ಕಲ್ಯಾಣದಲ್ಲಿ ಇರಲಾಗದೆಂದು ಅಲ್ಲಿಂದ ಅವನು ತನ್ನ ಹೆಂಡತಿ ನೀಲಾಂಬಿಕೆಯೊಡನೆ ಕೂಡಿಕೊಂಡು ಕಪ್ಪಡಿ ಸಂಗಮೇಶ್ವರನಲ್ಲಿಗೆ ಬಂದನು. ಮತ್ತು ಆ ಸ್ಥಳದಲ್ಲಿಯೇ ಅವನು ಐಕ್ಯ ಹೊಂದಿದನು.

ಮಧುವರಸ ಹರಳಯ್ಯನವರ ಈ ಕಥೆಯು ತ್ರಿಪದಿಯಲ್ಲಿ ರಚಿಸಲ್ಪಟ್ಟಿದ್ದು ಅದನ್ನು ನಾವು ಇಲ್ಲಿ ಪ್ರಸಿದ್ಧಿಸಿದ್ದೇವೆ. ಅದು ಬಹು ಸುಲಭ ಭಾಷೆಯಲ್ಲಿ ರಚಿಸಲ್ಪಟ್ಟಿರುತ್ತದೆ. ಇದರ ಮೂಲ ಗ್ರಂಥವನ್ನು ಇಂಡೀ ತಾಲೂಕು ಉಮ್ರಜ಼ಿ ಗ್ರಾಮದಲ್ಲಿರುವ ಶ್ರೀ. ದುಂಡನಗೌಡ ರಾಮನಗೌಡ ಪಾಟೀಲ ಶಾಲಾ ಮಾಸ್ತರ ಇವರು ನಮಗೆ ತಂದು ಕೊಟ್ಟರು. ಇದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಈಚಿಗೆ ಹರಳಯ್ಯನವರ ಕವಿತಾ ಬದ್ಧ ಚರಿತ್ರೆಯನ್ನು ಬಹಳ ಜನರು ಬೇಡಹತ್ತಿದ್ದಾರೆ. ಆದ್ದರಿಂದ ಇದನ್ನು ಈಗ ಸ್ವತಂತ್ರ ಗ್ರಂಥವಾಗಿ ಮುದ್ರಿಸಿದ್ದೇವೆ. ನಮ್ಮ ಹತ್ತಿರದಲ್ಲಿ ಹರಳಯ್ಯನ ಇನ್ನೊಂದು ಹಸ್ತಲಿಖಿತ ವಿಸ್ತಾರವಾದ ಗ್ರಂಥವೊಂದಿದೆ. ಅದನ್ನು ಮುಂದೆ ನಾವು ಸಮಯಾನುಸಾರ ಸ್ವತಂತ್ರವಾಗಿ ಮುದ್ರಿಸುವೆವು. ಆದರೆ ಎಲ್ಲ ವಿಷಯಗಳನ್ನು ಸ್ವಲ್ಪದರಲ್ಲಿ ಕ್ರೋಢೀಕರಿಸಿ ಈಗಿನ ಈ ಗ್ರಂಥವು ಬರೆಯಲ್ಪಟ್ಟಿದ್ದರಿಂದ ಇದು ಓದುಗರಿಗೆ ಹೆಚ್ಚಿಗೆ ಉಪಯೋಗವಾಗಬಹುದೆಂದು ಎಣಿಸಿ ಇದನ್ನು ಈಗ ಪ್ರಸಿದ್ಧಿಸಿದ್ದೇವೆ. ಮೂಲ ಪ್ರತಿಯು ಅನೇಕ ಹಸ್ತ ದೋಷಗಳುಳ್ಳದ್ದಾಗಿದೆ. ಬೇರೆ ಪ್ರತಿಗಳು ನಮಗೆ ದೊರೆಯದ್ದರಿಂದ ಅವುಗಳನ್ನೆಲ್ಲ ತಿದ್ದಲಿಕ್ಕೆ ನಮಗೆ ಸಾಧ್ಯ



ವಾಗಿರುವದಿಲ್ಲ. ಈ ಕಾವ್ಯವು ಸಾಮಾನ್ಯ ಜನರಿಗೆ ಸಹ ತಿಳಿಯಬೇಕೆಂದು ಕವಿಯ ಉದ್ದೇಶವಿರುವದರಿಂದ ಪದಗಳನ್ನು ಅವನು ಜನರಾಡುವ ಭಾಷೆಯಲ್ಲಿಯೇ ರಚಿಸಲು ಪ್ರಯತ್ನಿಸಿದ್ದಾನೆ. ಛಂದಶ್ಶಾಸ್ತ್ರದ ನಿಯಮಗಳನ್ನು ಅವನು ಅನುಸರಿಸಿರುವದಿಲ್ಲ. ಆದರೂ ಅನ್ನುವವರು ಪದಗಳನ್ನು ಸರಿಯಾಗಿ ಹೊಂದಿಸಿಕೊಂಡು ಅವನ್ನು ಚನ್ನಾಗಿ ಅನ್ನಬಹುದಾಗಿದೆ.

ವಿಜಾಪುರ.
ತಾ. ೧೫-೮-೪೧

ಫ. ಗು. ಹಳಕಟ್ಟಿ
ಸಂಪಾದಕ.

# ಹರಳಯ್ಯನ ಚರಿತ್ರೆಯು.

## ತ್ರಿಪದಿ.

ಕತ್ತಿಯು ಕರದಲಿ ಪಿಡಿ-ದೆತ್ತಿದ ಸಿರದ ಮಾಲೆ ।
ಹೊತ್ತ ಶೂಲದ ಮೇಲೆ ಪೆಣನು ಶಿವ ನಿಮ್ಮ ।
ಉತ್ತಮ ಮತಿಯ ಕುಡು ಎನಗೆ ॥೧॥

ಗಿರಿರಾಜನ ಮಗಳೆ-ಗರುವೆ ನೀ ಬಾರೆಂದು ।
ಕರೆದು ನಿಮ್ಮಡಿಗೆರಗುವೆನು ಪಾರ್ವತಿ ।
ವರವ ಕೊಟ್ಟೆನಗೆ ಕರುಣಿಸು ॥೨॥

ಛಪ್ಪನ್ನ ದೇಶಕ್ಕೆ-ಹೆಪ್ಪ ಕೊಟ್ಟನು ಸ್ವಾಮಿ ।
ಅಪ್ಪ ನಿಮ್ಮಡಿಗೆರಗುವೆನು ಬಸವಣ್ಣ ।
ತಪ್ಪದೆ ಮತಿಯ ಕೊಡು ಎನಗೆ ॥೩॥

ಭಕ್ತರ ಮಾತೆಯ-ಅರ್ಥಿಯಲಿ ಬಲಗೊಂಬೆ ।
ಸತ್ಯ ಬಸವಣ್ಣನರಸಿಯೆ ನೀಲಮ್ಮ ।
ಉತ್ತಮ ಮತಿಯ ಕೊಡು ಎನಗೆ ॥೪॥

ಸಕ್ಕರೆಯ ಹಾಲನ್ನು-ಇಕ್ಕಿ ಎನ್ನ ಸಲಹುವ ।
ಚಿಕ್ಕ ದಣ್ಣಾಯಕರ ಬಲಗೊಂಬೆ ಮುಂದಿನ್ನು ।
ಸಿಕ್ಕಿದ ಪದಗಳ ನಡಿಸಯ್ಯ ॥೫॥

ಪಾತಕತನದಿಂದ-ಕೀಟಕ ದೈವವ ಹಾಡೆ ।
ಕೋಟಲೆಗೊಂಡು ನುಡಿವರ ಮುಂದಿನ್ನು ।
ಪಾಟಗೆಟ್ಟವರ ಕಥೆಯಲ್ಲ ॥೬॥

ವರವಿಲ್ಲದ ದೈವವ-ಸರವೆತ್ತಿ ಕೊಂಡಾಡೆ ।
ಗುರುಮಂತ್ರ ಮೀರಿ ನರಕದಲಿ ಹೊರಳುವ ।
ಪರಿಯಲ್ಲ ಪುಣ್ಯ ಕಥೆಗೇಳಿ ॥೭॥

ಎಲ್ಲಾ ಪುರಾತನರ-ಮೆಲ್ಲಡಿಗಳ ನಾನು ।
ಸಲ್ಲೀಲೆಯಿಂದ ನೆನೆವೆನು ಮುಂದಿನ್ನು ।
ಒಲ್ಲಿಂತೆ ಪದವ ನಡಿಸುವೆ ॥೮॥

ಕಡೆಗಣ್ಣ ಖರ್ಜೂರ-ನಿಡುಗಣ್ಣ ಸಕ್ಕರೆ ।
ಒಡೆದು ಮೆದ್ದಂತೆ ರಸದಾಳಿ ಮುಂದಿನ್ನು ।
ತೊಡಗುವೆ ಹರಳಯ್ಯನ ಕಥೆಯ ॥೯॥

ಕಳುಹಿಸಿಕೊಂಡರು-ತ್ರಿಣಯನ ಕೆಯ್ಯಿಂದೆ ।
ಇಳೆಗೆ ಬಸವಣ್ಣನೊಡಗೂಡಿ ಶರಣರು ।
ಇಳಿದು ಬಂದರು ತಮ್ಮ ಮಠಕೆ ॥೧೦॥

ಒಬ್ಬರೊಬ್ಬರ ಕಂಡು-ಗರ್ಭೈಸಿತು ಭಕ್ತಿ ।
ಹಬ್ಬಿತು ಕಲ್ಯಾಣಪುರದಲಿ ಮುಂದಿನ್ನು ।
ಕೊಬ್ಬಿದ ಬಿಜ್ಜಳನನಿರುವುದಕೆ ॥೧೧॥

ಎಲ್ಲರಿಗೆ ಕಾಯಕ-ವ್ರಳ್ಳ ಕಟ್ಟಿನ ನೇಮ ।
ಹಳ್ಳಯ್ಯಗಳಿಗೆ ವ್ರತ ಒಂದು ಶರಣರ ।
ಮೆಲ್ಲಡಿಗಳಿಗೆ ಚರಣವ ॥೧೨॥

ಚರಣವಗೈವುತ-ಶರಣಾಳಿಗೀವುತ ।
ಕರುಣದಿಂದವರು ಕುಡುವದನು ಕೈಕೊಂಡು ।
ಹರನ ಜಂಗಮಕೆ ಉಣಿಸುವ ॥೧೩॥

ಕೃತ್ಯದಿ ಹರಳಯ್ಯ ನಿರುತಿಹ ಸಮಯದಿ ।
ಅಸ್ತಮಯವಾಗೆ ಶಯನದಿ ಸ್ವಪ್ನದಿ ।
ಭಕ್ತ ಬಸವಣ್ಣಗೆ ಶರಣೆಂಬ ॥೧೪॥

ಕಂಡನು ಕನಸನು-ಕೆಂಡಗಣ್ಣಿನ ಭಕ್ತ ।
ದಂಡನಾಯಕಗೆ ಶರಣೆಂಬ ವ್ರತವ ಕೈ ।
ಕೊಂಡನು ತನ್ನ ಮನದಲಿ ॥೧೫॥

ಕೆಲ ದಿನವು ಇಂತು–ಕೆಲಬರರಿಯದಿರೆ ।
ಒಲವಿಂದ ಹರಳಯ್ಯನಿರಲು ಸಮಯದಿ ।
ಗೆಲವಿಂದ ಬಂದ ಬಸವಣ್ಣ ॥೧೬॥



ರಾಜಶೇಖರ ಬಸವ-ರಾಜನೋಲಗದಿಂದ ।
ರಾಜಬೀದಿಯಲಿ ಬರುತಿರಲು ಹರಳಯ್ಯ ಕಂಡು ।
ಓಜೆಯಲಿ ಕರವ ಮುಗಿದನು ॥೧೭॥

ಪೂಜ್ಯಾಡ ಪುರುಷನೆ ಪ-ರವಾದಿ ದಲ್ಲಣನೆ ।
ಪಾವನ ಮೂರ್ತಿ ಪುರುಷನೆ ಬಸವಣ್ಣ ।
ದೇವ ನಿಮ್ಮಡಿಗೆ ಶರಣಾರ್ಥಿ ॥೧೮॥

ಶರಣೆಂದು ಹರಳಯ್ಯಗೆ–ಮರಳಿ ಬಸವೇಶ್ವರನು ।
ಶರಣು ಶರಣಾರ್ಥಿ ಎನುತಲಿ ತಾ ತನ್ನ ।
ಅರಮನೆಗಾಗಿ ನಡೆದನು ॥೧೯॥

ಶರಣ ಹರಳಯ್ಯಗಳು-ಶರಣು ವಂದನೆ ಹೊತ್ತು ।
ಭರದಿಂದ ಬಂದು ಮಠಕಾಗಿ ತಾ ತನ್ನ ।
ಅರಸಿಯು ಕೂಡೆ ನುಡಿದನು ॥೨೦॥

ಶರಣೆಗೆ ಶರಣ ಉ-ತ್ತರವಾಗಿ ಮತ್ತೊಂದು ।
ಶರಣೆನ್ನುವ ಪರಿಯೆಂದಾ ತಾ ತನ್ನ ।
ಅರಸಿಯು ಕೂಡೆ ನುಡಿದನು ॥೨೧॥

ಇಂದಿನ ದಿನ ಶರಣೆಲಿ-ಬಂದಿರುವ ದೋಷಗಳ ।
ಎಂದಿಗೆ ಕಳೆವೆನೆನುತಲಿ ಕಲ್ಯಾಣಮ್ಮ ।
ಚಂದದಿಂದೊಂದ ನುಡಿದಳು ॥೨೨॥

ನಮ್ಮಲ್ಲಿ ಪಳಿಯು-ಪಟಾವಳಿ ಮೊದಲಿಲ್ಲ ।
ನಿರ್ಮಳ ಜ್ಞಾನಿ ಬಸವಣ್ಣನ ಪಾದಕ್ಕೆ ।
ಚಮ್ಮಾವುಗೆ ಅನುವ ಮಾಡುವ ॥೨೩॥

ಸತಿಯು ಮಾತನು ಕೇಳಿ-ಅತಿ ಬೇಗ ಹರಳಯ್ಯ ।
ಸುತನ ಕರವಿಡಿದು ನಡೆಸಿದ ಕಾಯಕವ ।
ಅತಿಬೇಗದಿಂದಲನುಮಾಡಿ ॥೨೪॥

ಅಂಗ ಹಿಂಗಿಸಿಕೊಂಬ-ಅಂಗವಿನ್ನಾವುದು ।
ಲಿಂಗಬಸವಗೆ ಚರಣವನೊಯ್ದರೆ ।
ಹಿಂಗುವುದೆನ್ನ ಭವಮಾಲೆ ॥೨೫॥

ಮುತ್ತು ಮಾಣಿಕಗಳ-ಕೆತ್ತಿಸಿದ ಜಲರಾಶಿ ।
ಉತ್ತಮ ಕಳಶವಗೈದನು ಚಮ್ಮಾವುಗೆ ।
ಮುತ್ತೊಂದೊಮ್ಮನಗಳನಿಟ್ಟು ॥೨೬॥

ಒಪ್ಪವನಿಕ್ಕಿದ-ಎಪ್ಪತ್ತು ಗೊಂಡೆಯ ।
ಸರ್ಪನ ಹೆಡೆಗೆಯ್ಯುತಲಿ ಚಮ್ಮಾವುಗೆಯ ।
ಸಂಪ್ರಾಣಿಯಿಂದ ನಯವಿಟ್ಟ ॥೨೭॥

ವಜ್ರ ಮಾಣಿಕಗಳು-ಗುಜ್ಜುಗೊಂಡೆಗಳಿಕ್ಕಿ ।
ವಝು ಭಾಪೆಂದು ನಲಿದನು ತಾ ತನ್ನ ।
ಸಜ್ಜನ ಸತಿಯು ಕರೆದನು ॥೨೮॥

ಸತಿ ಶರಣೆ ಬಾ ಎಂದು-ಅತಿ ಹರುಷದಿಂದಲಿ ।
ಯತಿರಾಯ ನಮ್ಮ ಬಸವನ ಪಾದಕ್ಕೆ ।
ಸ್ತುತಿಸಿದೆ ಜೋಡು ಚರಣವ ॥೨೯॥

ಸತಿ ಪುರುಷರಿಬ್ಬರು-ಅತಿ ಹರುಷದಿಂದಲಿ ।
ಮಂಥನ ನಮಗುಂಟು ಇದರಿಂದ ಹರಳಯ್ಯನ ।
ಸತಿಯರುಹಿದಳು ಕಥನವ ॥೩೦॥

ವೀರಶೈವಾಗಮದ-ದಾರಿಗಳು ಕೆಟ್ಟಾವು ।
ಕಾರುಣ್ಯನಿಧಿಯೆ ಅರಿದಿರು ನಿಮಗೊಂದು ।
ನಾರಿಯು ಕಥನ ಕೇಳುವುದು ॥೩೧॥

ಹೇಳನ್ನ ಕಲ್ಯಾಣ-ಕಾಳಗ ಹಿಂದಕ್ಕು ।
ಕೇಳು ಹರಳಯ್ಯ ನುಡಿವಂದ ಇವು ಮುಂದೆ ।
ಸುಳ್ಳು ಮಾತಲ್ಲೆಂದರಿದಿರು ॥೩೨॥

ಕೆಡುವುದು ಕಲ್ಯಾಣ-ಪೊಡವೀಶನಳಿವನು ।
ಬಿಡುವರು ಗಣಕುಲ ನೆಲೆಯನು ಬಸವಣ್ಣ ।
ಮೃಡನ ಜಿಹ್ವೆಯುಲಡಗುವನು ॥೩೩॥

ಬಂದುದು ಜಯಸುವೆ-ನೆಂದನು ಹರಳಯ್ಯ ।
ಮುಂದೆ ಬಸವಣ್ಣನಿವನೊಯ್ಯೆ ಚರಣವ ।
ಮುಂದಿಟ್ಟು ನಾನು ನಮಿಸುವೆ ॥೩೪॥



ರುದ್ರಾವತಾರಿ-ಚಿದ್ರೂಪ ಶರಣನು ।
ಸದ್ಭಕ್ತ ಸೀಮೆ ಪರಂಜ್ಯೋತಿ ಹರಳಯ್ಯ ।
ರುದ್ರಾಕ್ಷಿ ಸ್ಥಾನದಿ ಧರಿಸಿ ॥೩೫॥

ಭಸಿತವನಿಟ್ಟನು-ನೊಸಲೊಳು ಹರಳಯ್ಯ ।
ಶಶಿಧರಶರಣ ನಡೆಗೊಂಡ ಬೇಗದಿ ।
ಬಸವಣ್ಣನಿರುವ ಮಠಕಾಗಿ ॥೩೬॥

ನಿಂದನು ಹರಳಯ್ಯ-ಮುಂದೆ ತಲೆವಾಗಿಲ ।
ಲೊಂದು ಯೋಚನೆಯ ನೆನೆದನು ನಾವಿಲ್ಲಿಗೆ ।
ಬಂದುದನರಿಪ ಪರಿ ಹೇಗೆ ॥೩೭॥

ಏಕ ವ್ರತದಿಂದ-ಲೋಕವನಾಳುವ ।
ಸಾಕ್ಷಾತ್ ಮಂತ್ರಿ ಬಸವಣ್ಣನ ಕಾಂಬುದಕೆ ।
ನೂಕುಸಂದಣಿ ವಶವಲ್ಲ ॥೩೮॥

ಲಕ್ಷದ ಮೇಲೆತೊಂ-ಭತ್ತಾರುಸಾವಿರ ।
ಮುಕ್ಕಣ್ಣನವರೆನಿಸುವ ಬಸವಗೆ ।
ಲೆಕ್ಕವೆ ನಾವು ಇವರಿಗೆ ॥೩೯॥

ಎಮ್ಮಯ್ಯ ಸಿರಿವಂತ-ಬ್ರಹ್ಮಾಂಡ ನಾಯಕ ।
ಉಮಾಪತಿ ಶಿವನೆ ಹಿತಕಾರಿ ಕಾಂಬುದಕೆ ।
ನಮ್ಮ ಪಾಡೇನು ಅವರಿಗೆ ॥೪೦॥

ಉರದ ಲಿಂಗವ ಬಿಟ್ಟು-ಕರದೊಳಗಿಂಬಿಟ್ಟು ।
ಪುರಹರನೆ ಕೇಳು ನುಡಿಯೊಂದ ನಾವು ಬಂದು ।
ದರುಹಬೇಕೆಂದನವರಿಗೆ ॥೪೧॥

ಹಳ್ಳುಗ ಬಂದಿಹ-ನೆಂದು ಬಸವಣ್ಣಗೆ ।
ಮೆಲ್ಲನೆ ಕಿವಿಯೊಳರುಹೆಂದ ಪ್ರಾಣದ ।
ವಲ್ಲಭನೊಡನೆ ಉಸುರಿದ ॥೪೨॥

ಚಿತ್ರ ಸಂಗಮನಾಥ-ಚಿತ್ರದಿಂದಲಿ ಹೋಗಿ ।
ಚಿತ್ರದೊಳಗೆ ಅರುಹಿದನು ಬಾಗಿಲಿಗೆ ।
ಭಕ್ತ ಬಂದಿಹನು ಬಸವಣ್ಣ ॥೪೩॥

ಬಂದುದನರಿದನು-ತಂದೆ ಬಸವಣ್ಣನು ।
ಮುಂದಣ ಹರೆಯ ಹೊಯಿಸಿದ ಬಸವಣ್ಣ ।
ನಂದಿಯ ಧ್ವಜವ ತರಿಸಿದ ॥೪೪॥

ಬಾಗಿಲಿಗೆ ಬಂದಿಹನು-ನಾಗಧರನ ಭಕ್ತ ।
ಸಾಗಿಸುವರಿಲ್ಲ ಒಳಯಿಕೆ ಇಂದಕ್ಕೆ ।
ನಾಗಲಿದೇವಿಗರುಹಿದ ॥೪೫॥

ನಂದಿಯ ಧ್ವಜವನು-ಮುಂದೆ ಗುಡಿ ತೋರಣ ।
ದುಂದುಭಿ ಹರೆ ಮೊಳಗಿಸಿದ ಬಸವಣ್ಣ ।
ಗಂಧದುಪ್ಪರಿಗೆಯಿಂದ ಹೊರಟ ॥೪೬॥

ಕಸ್ತುರಿ ಬಾಗಿಲ- ಮತ್ತೆ ಹೊರಹೊಂಟನು ।
ಸ್ವಸ್ತದಿಂದಲಿ ನಡೆಗೊಂಡ ಬಸವಣ್ಣ ।
ಮಸ್ತಕ ಮಣಿದು ನಮಿಸಿದ ॥೪೭॥

ವಜ್ರದ ಬಾಗಿಲಲಿ- ಹೆಜ್ಜೆವೊಂದಡಿ ಇಟ್ಟು ।
ಸಜ್ಜನ ಶರಣ ಬಸವಣ್ಣ ತಾನಾಗ ।
ಗುಜ್ಜಾಗಿ ಸಿರವ ಮಣಿದನು ॥೪೮॥

ಚಿನ್ನದ ಬಾಗಿಲ ಮುಂದೆ-ರನ್ನ ರತ್ನದ ಬೊಂಬೆ ।
ಬಿನ್ನೈಸಿದವು ಜಯತೆಂದು ಬಸವಣ್ಣ ।
ಚನ್ನಯ್ಯನವರ ಮಗ ಬಂದ ॥೪೯॥

ಚಿತ್ರದ ಬಾಗಿಲಲಿ-ಪುತ್ಥಳಿಬೊಂಬೆಗಳು ।
ಅರ್ಥಿಯಿಂದ ಕರಗಳ ಮುಗಿದು । ಬಾಗಿಲಿಗೆ ।
ಕಕ್ಕಯ್ಯನವರ ಮಗ ಬಂದ ॥೫೦॥

ಬಂದು ಹೇಳಿದನಹುದು-ತಂದೆ ಸಂಗಮನಾಥ ।
ಬಂದೆನು ನಾನು ಅದರಿಂದ ಹರಳಯ್ಯ ।
ನಿಂದ ಬಾಗಿಲಿಗೆ ಇದಿರಾಗಿ ॥೫೧॥

ಭಕ್ತರ ಭಾಗ್ಯದ-ನಿಧಿಯೆ ಚಿಂತಾಮಣಿ ।
ಭಕ್ತರ ಬಲ ಸ್ವಯಂಜ್ಯೋತಿ ಬಸವಣ್ಣ ।
ಚಿತ್ತೈಸಿ ಪಾದ ಚರಣಕೆ ॥೫೨॥

7987



ತಕ್ಕೈಸಿಕೊಂಡನು-ಚಿತ್ತೈಸಿಕೊಂಡನು ।
ಚಿತ್ತೈಸಿದಿರಿ ಮುಕ್ತನಾದೆನು ಬಸವಣ್ಣ ।
ಕರ್ತೃ ಹರುಷದಿ ನುಡಿದನು ॥೫೩॥

ಓಂ ನಮಃ ಶಿವ ಶಿವ-ಏಳು ಬಾಗಿಲ ಹೊರಗೆ ।
ಕೀಳು ಮಾದಿಗರ ಹರಳುಗನು ನಾ ನಿಮ್ಮ ।
ಪಾದಚರಣವ ಹೋಲುವೆನೆ ॥೫೪॥

ಬಂದು ಬಾಲಕರಂತೆ-ಪಿಡಿದು ಬಂದಿಲ್ಲಿಗೆ ।
ಹಿಂದಣ ಪಾಪಕ್ಷಯವಕ್ಕು ಬಸವಣ್ಣ ।
ಮುಂದೆ ಕೊಂಡಾಡಿ ನಲಿದನು ॥೫೫॥

ಹಿಡಿವರೆ ಕರಗಳ-ಪ್ಪಡನರಿವ ಶರಣರು ।
ಕೆಡುಕುಲದವರ ಧರೆಯೊಳು ಎಂದೆನುತ ।
ನುಡಿದ ಹರಳಯ್ಯ ಮುದದಿಂದ ॥೫೬॥

ಕೆಟ್ಟ ಕುಲದವರನು-ಮುಟ್ಟಬಹುದೆ ನೀವು ।
ಸೃಷ್ಟಿಗೀಶ್ವರನ ಶರಣರು ಎಂದೆನುತ ।
ಕಟ್ಟಣೆ ಮಾತನು ನುಡಿದನು ॥೫೭॥

ಪರುಷ ತಿಪ್ಪೆಯೊಳು-ಪುರುಷ ಮಣ್ಣಾಗಿರಲು ।
ಅದ ಸಾಣೆಗಾರರು ಬಿಡುವರೆ ಎಂದೆನುತ ।
ಪರಶಿವ ಬಸವ ನುಡಿದನು ॥೫೮॥

ಕಕ್ಕಯ್ಯಗಳಲ್ಲಿ-ಒಕ್ಕ ಪ್ರಸಾದಕೆ ।
ಹೊಕ್ಕು ನಾ ಕಾಯ್ದೆನನುದಿನ ಹರಳಯ್ಯ ।
ಸಿಕ್ಕಿತೆ ಎನಗೆಲೆ ತಂದೆ ॥೫೯॥

ಹೊಲೆ ಎಂಬುದೊಂದು-ಕಲಿಯಲ್ಲಿ ಹುಟ್ಟಿತು ।
ನೆಲೆಯರಿಯದವರು ನುಡಿವರು ನಿಮ್ಮನ್ನ ।
ಮೊಲೆವಾಲಿನೊಳಗೆ ವಿಷ ಉಂಟೆ ॥೬೦॥

ಅಚ್ಚ ಪ್ರಸಾದಕ್ಕೆ-ನಿಚ್ಚ ನಿಮ್ಮಲ್ಲಿ ಕಾಯ್ದೆ ।
ಹುಚ್ಚನೆ ನಾನು ಎಲೆ ತಂದೆ ಹರಳಯ್ಯ ।
ಸುಚಿತ್ತದೇಹಿ ಶರಣಾರ್ಥಿ ॥೬೧॥

ಭಕ್ತರಣುಗ ನಾನು-ಭೃತ್ಯನು ನಿಮ್ಮಡಿಗೆ।
ಎತ್ತೊಂದು ನಾನು ಪಶುಪ್ರಾಣಿ ಹರಳಯ್ಯ।
ಸ್ತುತಿಸಬೆಡವೆಲೆ ತಂದೆ ॥೧೨॥

ಕಡಲನು ಜಡೆಯೊಳು-ಮುಡಿದನಡಿಯ ನಿಮ್ಮ।
ನುಡಿಗೆಯುಂಬಲಿಯು ಸವಿವಾಗ ಆರಾದೊಡೆ।
ಬಿಡಿಸಿದರೆ ತಂದೆ ಧರೆಯೊಳು ॥೧೩॥

ಚರ್ಮದ ಕರ್ಮವ-ತೊಳೆವ ಪರುಷ ನೀನು।
ವರ್ಮವ ಬಲ್ಲವರಾರು ಹರಳಯ್ಯ।
ನಿರ್ಮಲದೇಹಿ ಶರಣಾರ್ಥಿ ॥೧೪॥

ಕರೆದ ನೀಲಮ್ಮನ-ಭರದಿಂದ ಬಸವಣ್ಣ।
ಶರಣ ಕುಲಕೆ ತಿಲಕಗೆ ಹರಳೈಯ್ಯಗೆ।
ಶರಣು ಮಾಡೆಂದು ಅರುಹಿದ ॥೧೫॥

ಎಂದ ಮಾತನು ಕೇಳಿ-ಬಂದಳು ನೀಲಮ್ಮ।
ನಿಂದು ಹಸ್ತಗಳ ಮುಗಿದಳು ಚರಣಕೆ।
ವಂದಿಸಿ ಕೃಪೆಯ ಪಡೆದಳು ॥೧೬॥

ಶರಣು ಚಿನ್ಮಯರೂಪ-ಶರಣು ಭಕ್ತರ ಬಂಧು।
ಶರಣು ಎಮ್ಮಯ್ಯ ಪರುಷವೆ ಹರಳಯ್ಯ।
ಶರಣು ನಿಮ್ಮಡಿಗೆ ಶರಣಾರ್ಥಿ ॥೧೭॥

ಶರಣೆ ನೀಲಮ್ಮನು-ಶರಣ ಹರಳಯ್ಯಗೆ।
ಶರಣು ಮಾಡಿದಳು ಚರಣಕೆ ನೀಲಮ್ಮ।
ವರ ಶಿಸುವು ನಾನೆಂದು ನಮಿಸಿದಳು ॥೧೮॥

ತೊತ್ತಿನ ಮಕ್ಕಳ-ತೊಡೆಯನೇರಿಸಬಹುದೆ।
ಪೃಥ್ವಿಯೊಳಾಡುವ ನುಡಿಯುಂಟೆ ಎಲೆ ತಾಯಿ।
ಭಕ್ತರಾಣೆನ್ನ ಬಿಡು ಬೇಗ ॥೧೯॥

ಹಸ್ತವ ಮುಗಿಯುತ-ವಿಸ್ತರಿಸಿದ ಶರಣರ।
ಚಿತ್ತಜ ವೈರಿ ಬಸವೇಶ ನುಡಿಗೇಳಿ।
ಕರ್ತ ಹರಳಯ್ಯ ನುಡಿದನು ॥೨೦॥



ಹಸ್ತವ ಮುಗಿವುತ-ವಿಸ್ತರಿಸಿದ ಶರಣರ।
ಚಿತ್ತಜ ವೈರಿ ಬಸವೇಶ ನುಡಿಗೇಳಿ।
ಕರ್ತ ಹರಳಯ್ಯ ನುಡಿದನು ॥೨೧॥

ಮೃಡನವತಾರದ - ಒಡೆಯ ಬಸವಣ್ಣ ನಿಮ್ಮ।
ಅಡಿಗೊಂದು ಜೋಡು ಚರಣವ ತಂದೆನು।
ಪಡೆವೆನು ಫಲವ ಎನುತಲಿ ॥೨೨॥

ಸಾಕು ಶರಣರಿಗೇಕೆ-ಇಷ್ಟೊಂದು ನುಡಿಗಳು।
ನಾಲ್ಕು ಯುಗದಲ್ಲಿ ತಿರುಗಿದರೆ ಇಂದಿನ ದಿನಕೆ।
ಬೇಕೆಮಗೆ ನಿನ್ನ ಕರುಣವು ॥೨೩॥

ಮುಂದಣ ಕಥನಕೆ-ಇಂದಿನ ದರುಶನವು।
ವಂದನೆಯ ಕೊಳ್ಳಿ ಇದರಿಂದ ನಾನೊಮ್ಮೆ।
ನಂದಿಶಂಕರಗೆ ಶರಣೆಂಬೆ ॥೨೪॥

ಶರಣು ಶರಣಾರ್ಥಿ-ಶರಣು ನಿಮ್ಮಡಿಗಳಿಗೆ।
ಕರುಣ ನಮ್ಮಲ್ಲಿರಬೇಕು ಹರಳಯ್ಯ।
ನಿರುಪಮ ಚಿತ್ತೈಸು ಬಸವಯ್ಯ ॥೨೫॥

ಚಂದದಿಂದಲಿ-ಚಮ್ಮಾವುಗೆಯ ತಕ್ಕೊಂಡು।
ಆನಂದದಿಂದಲಿ ನಡೆದಾಡೆ ನೀಲಮ್ಮ।
ಮುಂದೆ ಹರಳಯ್ಯನ ಕಳುಹಲು ॥೨೬॥

ಶರಣಬಸವೇಶನು–ಕರುಣೆ ನೀಲಮ್ಮನು।
ಹರುಷದಿ ಹರಳಯ್ಯನ ಕಳುಹುವ ಸಮಯದಿ।
ವಿರಚಿಸುವೆ ಮುಂದೆ ಕಥನವ ॥೨೭॥

ಒಂದನೆ ಪ್ರಥಮದ–ಸಂಧಿ ಇಲ್ಲಿಗೆ ಮುಗಿಯೆ।
ಚಂದ್ರಶೇಖರನ ಶರಣರಿಗೆ ಮತ್ತಿನ್ನು।
ಮುಂದೆ ಮೆಯ್ಯಿಕ್ಕಿ ನಮಿಸುವೆನು ॥೨೮॥

---

## ೨ ನೆಯ ಸಂಧಿ.

ಮುಂದಣ ಕಥೆಯನಾ-ನಂದದಿ ಕೇಳ್ವುದು ।
ಇಂದು ಶರಣರ ಕಥನವ ಮದುವೆಯಾ ।
ನಂದದಿ ಕೇಳೀ ಶರಣರು ॥೧॥

ಪಟ್ಟಾವಳಿ ಸೀರೆಯಲ್ಲಿ-ಕಟ್ಟಿ ಚಮ್ಮಾವುಗೆಯ ।
ಕೊಟ್ಟು ಕಳುಹುವ ಸಮಯದಿ ಮಧುವರಸ ।
ನೆಟ್ಟನೆ ತಾನು ನಡೆತಂದ ॥೨॥

ಹನ್ನೆರಡು ಸಾವಿರ-ಚಿನ್ನಕರಣಿಕರಿಗೆ ।
ಮಾನ್ಯ ಗಜಸಿಂಹ ಮಧುವರಸ ಊಟಕೆ ॥
ತನ್ನರಮನೆಗೆ ಬರುತಿರ್ದ ॥೩॥

ಬರುತ ಕಂಡನು ಶಿವ-ಶರಣ ಹರಳಯ್ಯನ ।
ಇರವ ದಿಟ್ಟಿಸಿ ನೋಡುತಲಿ ತಾ ತನ್ನ ॥
ಚರರ ಕೆಯ್ಯಿಂದ ನಿಲಿಸಿದ ॥೪॥

ಎಲ್ಲಿಗೆ ಹೋಗಿದ್ದೆ-ಹಳ್ಳಯ್ಯನೀನುಸುರು ।
ಬಲ್ಲಿದ ಧೊರೆತನದಿ ಕೇಳಲು ಬಸವಣ್ಣ ।
ನಲ್ಲಿಗೆ ಹೋಗಿಯೆ ಬಂದೆನು ॥೫॥

ಬಸವನಲ್ಲಿಗೆ ಹೋಗಿ-ಬರುವ ಕಾರಣವೇನು ।
ಕೃಷಿಯುವ (?) ಹೇಳು ಎನುತಲಿ ॥
ಬೆಸಗೊಂಡ ನಿಂತೆಂದು ನುಡಿದನು ॥೬॥

ನಮ್ಮ ಕಾಯಕವನು-ಹಮ್ಮೈಸಿ ಕೊಂಡೊಯ್ದೆ ।
ಧರ್ಮಸ್ವರೂಪ ಬಸವಣ್ಣ ಮೆಟ್ಟದೆ ॥
ಚಮ್ಮಾವುಗೆಯ ಕಳುಹಿದನೆನೆ ॥೭॥

ತಂದುದ ಕಳುಹುವ-ಇಂದಿನ ಮತವಲ್ಲ ।
ಎಂದ ಆ ಹಾರುವ ಮಧುವರಸ ತಾನಾಗ ॥
ನಿಂದು ಮೆಟ್ಟುವೆನೆನುತಲಿ ॥೮॥

ನಿನಗೆ ಮೆಟ್ಟಸಲೆನ್ನ-ಮನಕೆ ನಿರ್ಮಳವಿಲ್ಲ ।
ಘನ ಮಹಾ ಶರಣ ಬಸವಣ್ಣಗೆ ತಂದುದ ॥
ಅನುಕೂಲವಲ್ಲ ಭವಿ ನೀನು ॥೯॥



ಆದೊಡೇನು ಕಾರಣವುಳ್ಳ ಕಾಯಕ ।
ಮಾರುಕೊಂಡವರು ಚರಣವ ಮೆಟ್ಟಲು ॥
ಬಾರದೆ ಹೇಳು ಹರಳಯ್ಯ ॥೧೦॥

ಕರುಣ ಸಾಗರ ಶಿವ-ಶರಣ ಬಸವಗೆ ತಂದ ।
ಚರಣಕ್ಕೆ ಬದ್ಧಭವಿ ನೀನು ಮೆಟ್ಟಿದರೆ ॥
ಹರಣ ಉಳಿಯದು ಮಧುವಯ್ಯ ॥೧೧॥

ಎಂದ ಮಾತಿಗೆ ಕೋಪ-ದಿಂದಲಿ ಮಧುವರಸ ।
ಬಂದುದು ಬರಲಿ ಎನುತಲೆ ಕೋಪದಿ ॥
ತಂದವನ ಕೈಸೆಳೆ ಕೊಂಡ ॥೧೨॥

ಶಿವನೆ ಬಲ್ಲನು ಬದ್ಧ-ಭವಿಗೆ ನಾ ಮನ ಒಪ್ಪೆ ।
ಇವ ನಾನು ಕೊಟ್ಟವನಲ್ಲ ಹರಳಯ್ಯ ॥
ಅವಧಾನಿ ಮನೆಗೆ ನಡೆದನು ॥೧೩॥

ತರಳ ಮಧುವರಸನು-ದುರುಳತನದಿ ಮೆಟ್ಟೆ ।
ಬೆರಳು ಸರ್ವಾಂಗವಳಿಯಲು ಅದ ಕೇಳಿ ।
ಹರಹರಾ ಎಂದ ಬಸವಣ್ಣ ॥೧೪॥

ಕರುಣಿ ಬಸವೇಶನ-ತರುಣಿ ಅಡಿದಳೊಂದು ।
ಹರಣದ ಹದನನರಿಯರು ಶರಣರು ॥
ತಂದ ಚರಣದ ಫಲವನದನುಣ್ಣೆ ॥೧೫॥

ಇತ್ತ ಚಿತೆಯುರಿಯಿಂದೆ-ಮತ್ತೆ ಚರ್ಮವ ಸುಲಿಯೆ ।
ಹೆತ್ತ ತಾಯಿ ಕಡು ಮರುಗಿದಳು ಮಗನಿಗೆ ।
ಎತ್ತಣ ವಿಧಿಯೋ ಎನುತಲಿ ॥೧೬॥

ಅಂದಾರು ತಿಂಗಳು-ಅಂದವಳಿದಿರಲು ।
ಮುಂದೆ ಪವಾಡ ಮೆರೆಯಲು ಆ ದಿನಕೆ ।
ತಂದಿಟ್ಟರೊಂದು ಕಥನವಾ ॥೧೭॥

ಮಜ್ಜನ ಮಾಡೆಂದು-ಅಜ್ಜಿ ಹೇಳಿದಳೊಂದು ।
ಹೆಜ್ಜೆಯನಿಟ್ಟು ನಡೆದನು ಮಧುವರಸ ।
ಮಜ್ಜನ ಮಾಡಲನುವಾದ ॥೧೮॥

ತನ್ನ ರಾಣಿಯರೀರ್ವರು-ಎಣ್ಣೆಯು ಸೂಡಲು ।
ಸಣ್ಣಾಗಿ ನಖವ ಅಲುಗುತಲಿ ಮಧುವರಸ ।
ಎಣ್ಣೆ ಮಜ್ಜನಕೆ ಅನುವಾದ ॥೧೯॥

ಕೊಪ್ಪರಿಗೆ ಅಗ್ಗಣಿ-ಯುಕ್ಕುತ ಕಾಯ್ದಿರೆ ।
ಮತ್ತಮಾನೀರು ಬೆರೆಯಲು ।
ಮನೆಯಲಿನೀರಿಲ್ಲದಿರಲು ಆಗ ॥೨೦॥

ಓಡುತಳವುತ-ಗೌಡಿ ಬೇಗನೆಬಂದು ।
ಸಿವುಡನು ಬೇಗದೆ ಕೊಡನ ತಕ್ಕೊಂಡು ।
ಗೌಡಿ ಬೇಗನೆ ನಡೆದಳು ॥೨೧॥

ಬಾಗಿಲು ಗಾವುಲು-ನಾಗಭೂಷಣ ಶಿವನು ।
ಆಗಿನದೊಂದು ಕಥನವ ಕತ್ತಲೆ ಮಂಜು ।
ಆಗ ಬೇಗದಲಿ ಮುಸುಕಿತ್ತು ॥೨೨॥

ಬರಿಗೊಡನೊಯ್ದರೆ-ತರಿವರು ಕಿವಿಮಾಗ ।
ಉರದ ಸಂಗಯ್ಯನನೀಗ ಉದಕದ ।
ಹರಿವ ತೋರೆಂದು ನಮಿಸಿದಳು ॥೨೩॥

ಸಣ್ಣ ಮಳೆಯುದರಲು-ಕಣ್ಗೆ ಕಾವಳಗೈದು ।
ಹೆಣ್ಣು ಬೇಗದಲಿ ನಡೆದಳು ಬಚ್ಚಲ ಉದಕ ।
ಎಣ್ಣೆಗಳಂತೆ ತಿಳಿದಿರೆ ॥೨೪॥

ಹೊತ್ತು ಹೋಯಿತ್ತೆಂದು-ತೊತ್ತು ಬೇಗನೆ ಬಂದು ।
ಮತ್ತೆ ಹರಳಯ್ಯನ ಮನೆಯಲ್ಲಿ ಬಾಗಿಲ ಬಳಿಯು ।
ಬಚ್ಚಲುದಕವನು ಮೊಗೆದಳು ॥೨೫॥

ಧಡಧಡಿಸಿ ನಡೆದಳು-ಕೊಡನ ಬೇಗನೆ ಹೊತ್ತು ।
ಒಡೆಯ ಕೋಪಿಸುವನೆನುತಲಿ ಕೊಪ್ಪರಿಗೆಯೊಳು ।
ಕೆಡಹಿದಳು ತಂದ ಉದಕವ ॥೨೬॥

ರಂಭೆಯರಿಬ್ಬರು-ತಂಬಿಗೆಯ ತಕ್ಕೊಂಡು ।
ತುಂಬಿ ಉದಕವನೆರೆಯಲು ಅವನ ಭವ ।
ಹಿಂಗಿತು ಪದವ ನಡಿಸುವೆ ॥೨೭॥



ಅತಿ ಚೋದ್ಯವಾಯಿತು-ಅತಿ ಚಿತ್ರವಾಯಿತು ।
ಮಿತ್ರರಿಬ್ಬರ ಮುಖ ನೋಡಿ ಎನ್ನಂಗ ।
ಸುಚಿತ್ತ ಪರಿಯೆಂತು ॥೨೮॥

ಕಸಿಯಿಸಿ ಗೌಡಿಯು-ಒರಸಿಕೊಂಡನು ಮುಖವ ।
ತರಿಸಿದಿರೆಲ್ಲಿ ಉದಕವ ಎಂದೆನುತ ।
ಹರುಷದಿಂದವನು ಬೆಸಗೊಂಡ ॥೨೯॥

ಕರಸಿದಿರು ಗೌಡಿಯು-ಧೊರೆಯು ಕಟ್ಟೆದಿರಿಗೆ ।
ಕರ ಪಾದ ನಡುಗೆ ನಯನದಿಯಗ್ಗಣಿ ಬಾಯ ।
ಬರಿವುತ ಬಿಕ್ಕಿ ಬೆದರುತ ॥೩೦॥

ಎಲ್ಲಿ ತಂದುದಕವ-ಕೊಲ್ಲೆ ಬಡಿಯೆ ನಿನ್ನ ।
ಎಲ್ಲವ ಹೇಳು ಎಂದೆನುತ ಗೌಡಿಗೆ ।
ಗಲ್ಲವ ಪಿಡಿದು ಬೆಸಗೊಂಡ ॥೩೧॥

ಕಲ್ಯಾಣದೊಳಗುಳ್ಳ-ಎಲ್ಲ ಪುರಾತರಿಗೆ ।
ಬಲ್ಲಿದರವರು ಶರಣರು ಹರಳೈಗಳು ।
ಅಲ್ಲಿ ಉದಕವ ಮೊಗೆದೆನು ॥೩೨॥

ಅರ್ಚನೆವಂತರು-ನಿಚ್ಚ ಲಿಂಗೈಕ್ಯರು ।
ಸುಚಿತ್ರವುಳ್ಳ ಶರಣರು ಹರಳೈಗಳ ।
ಬಚ್ಚಲ ಉದಕವ ಮೊಗೆದೆನು ॥೩೩॥

ಪಟ್ಟಾವಳಿ ಸೀರೆಯ-ಕೊಟ್ಟನು ಗೌಡಿಗೆ ।
ಕೆಟ್ಟಂಗವೆನ್ನ ಉಳುಹಿದೆ ನಾ ನಿನ್ನ ।
ಹೊಟ್ಟೆಲಿ ಬಂದ ಶಿಸುವೆಂದ ॥೩೪॥

ನೇವುರ ಅಂದುಗೆ-ಪಾಯ್ಪಟ್ಟೆ ಪದಕವು ।
ಗವುಳಿ ಸರದ ಹಿರಿಯೋಲೆಯಾಭರಣವು ।
ತಾಯಿ ನಿನಗೆಂದು ಕೊಡಿಸಿದ ॥೩೫॥

ಶರಣ ಪತಿಗಳಿಗೆಲ್ಲ-ಪರಿಣತನಾಯಕ ।
ಹರನವತಾರ ನಿಜಭಕ್ತ ಹರಳಯ್ಯಗೆ ।
ಶರಣು ಮಾಡುವೆನು ಚರಣಕೆ ॥೩೬॥

ತೊಡುವ ತೊಡಿಗೆಯನು-ಮಡದಿಯಾಭರಣವ ।
ಮುಡುಪಗಟ್ಟಿಸಿ ಉಡುಗೊರೆಯ ಹರಳಯ್ಯಗೆ ।
ಕಡುಬೇಕು ನಾವು ಆವರಿಗೆ ॥

ಕಟ್ಟಿವರೇನು-ಕೊಟ್ಟು ಕಳುಹಿದರೇನು ।
ಮುಟ್ಟುವರಲ್ಲ ಪರಸೊಮ್ಮನೆಂದಳು ತಾ ।
ಕೊಟ್ಟಳುತ್ತರವ ಮಹಾದೇವಿ ॥೩೮

ಒಡವೆ ವಸ್ತ್ರಗಳನು-ಕಡಗ ಕಂಠ ಮಾಲೆ ।
ಎಡೆ ನೀಲ ಪಚ್ಚ ರತ್ನವ ಕೊಟ್ಟರೆ ।-
ಹಿಡಿವರಲ್ಲ ಪರಸೊಮ್ಮ ॥೩೯

ಪೊಡವಿ ಪೊಲ್ಲುಡಿಸಲು-ಹೆಡೆಫಣಿಯುಡುಗಲು ।
ಪಡುವಲ ರವಿಯುದಯಿಸಲು ಭಕ್ತರು ।
ಹಿಡಿವರಲ್ಲ ಪರಸೊಮ್ಮ ॥೪೦

ಅಡಿಗಡಿಗೆ ವಂದಿಸುವೆ-ನಡೆವೆ ನಾನಲ್ಲಿಗೆ ।
ಕುಡುವೆನು ನನ್ನ ಮಗಳನು ಎಂದೆನುತ ।
ನುಡಿದನು ಮಧುವರಸ ಮುದದಿಂದ ॥೪೧

ಅಂಗದ ಮೇಲೆ ಶಿವ-ಲಿಂಗವಿಲ್ಲದವರ ।
ಅಂಗಣ ಹೊಗಲುಗುಡರಯ್ಯ ಎಂದೆನುತ ।
ಹಿಂಗದೆ ಮಧುವರಸಗೆ ನುಡಿದಳು ॥೪೨

ಅಂಗದ ಮೇಲೆ ಶಿವ-ಲಿಂಗವು ನಿನಗಿಲ್ಲ ।
ಗಂಗೆಯ ತಂದ ಪರಿ ಹೇಗೆ ಎನುತಲಿ ।
ಹಿಂಗದೆ ಮಧುವರಸ ಬೆಸಗೊಂಡ ॥೪೩॥

ಅಂಗದ ಭವವೆಲ್ಲ-ಹಿಂಗಿತು ನಿನ್ನಿಂದ ।
ಲಿಂಗವ ಕೊಡು ತನಗೆಂದು ಮಹಾದೇವಿಯ ॥
ಅಂಘ್ರಿಯ ಹಿಡಿದು ನಮಿಸಿದ ॥೪೪॥

ಕಟ್ಟಿದರೆ ಲಿಂಗವ-ನೆಟ್ಟನೆ ನಿಮ್ಮವರು ।
ಕೆಟ್ಟನು ತಮ್ಮ ಕುಲಕೆಂದು ವಿಪ್ರರು ।
ಮುಟ್ಟರು ನಿನ್ನ ಮಧುವರಸ ॥೪೫॥



ಸುಡುವೆ ಹಾರುವ ಕುಲವ-ಸೆಡುವೆ ನಾನೀ ಕ್ಷಣ ।
ಕೊಡು ನನಗಿಷ್ಟಲಿಂಗವನು ಮಹಾದೇವಿ ॥
ಅಡಿಗಳಿಗಾಗ ವಂದಿಸಿದ ॥೪೬॥

ಬಂಧು ಬಳಗವ ಬಿಟ್ಟು-ಇಂದು ಧರಿಸಿ ಲಿಂಗವ ।
ನಿಂದಿಸುವರು ಜನರೆಲ್ಲ ನಿಮ್ಮಯ ।
ತಂದೆ ತಾಯಳಿಗರುಹೆಂದು ॥೪೭॥

ನಡೆಪೋಗು ಅಲ್ಲಿಗೆ-ಜಡೆಯ ಜಂಗಮಲಿಂಗ ।
ಕೊಡುವರು ಲಿಂಗವನವರು ಎಂದೆನುತ ।
ನುಡಿದಳುತ್ತರವ ಮಹಾದೇವಿ ॥೪೮॥

ಅಂಗ ಶೋಭನ ಗವಿ-ಲಿಂಗ ಶೋಭನ ಗವಿ ।
ಜಂಗಮವಿರುವ ಮಠಕಾಗಿ ಮಹಾದೇವಿ ।
ಹಿಂಗದೆ ಮಧವರಸನೊಡಗೊಂಡು ॥೪೯॥

ಮದಗಜಗಮನೆಯರು-ಮದಕೋಕಿಳ ಧ್ವನಿಯವರು ।
ಮದ ಜೀವರುಳ್ಳ ಸ್ತ್ರೀಯರು ನೆರೆದರು ।
ಒದಗಿ ಮಧುವರಸನೊಡಗೂಡಿ ॥೫೦॥

ಈಶ ಲಾವಣ್ಯ ವಿ-ಶೇಷದ ಶೃಂಗಾರ ।
ಈಶನ ಶರಣರಂತೆ ನಡೆದರು ।
ಈ ಶಿವಭಕ್ತರೊಡಗೂಡಿ ॥೫೧॥

ಬಂದಳು ಮಹಾದೇವಿ–ನಿಂದು ಮಹತ್ತಿಗೆ ।
ವಂದನೆ ಮಾಡಿ ನುಡಿದಳು ಮಧುವರಸಗೆ ।
ಇಂದು ದೀಕ್ಷೆಯ ಕೊಡು ಸ್ವಾಮಿ ॥೫೨॥

ಎಂದ ಮಾತನು ಕೇಳಿ-ಇಂದುಧರನ ರೂಪು ।
ಸಂದ ಪ್ರಮಥರ ಬೆಸಗೊಂಡ ಮಹಾದೇವಿ ।
ಸಂದ ದೀಕ್ಷೆಯ ಪರಿಯೆಂತು ॥೫೩॥

ವಿಪ್ರ ಕುಲದಲಿವ-ತಪ್ಪದೆ ತಾ ಬಂದು ।
ತಪ್ಪು ರಕ್ಷೆಗಳ ಕತದಿಂದ ಇವನಂಗವು ।
ಪಳದು ಬಹಳ ಬಳಲಿದ ॥೫೪॥

ನೆಟ್ಟನೆ ಕರಮುಗಿದು-ಸಾಷ್ಟಾಂಗವೆರಗಿದ ।
ಖಟ್ವಾಂಗಧರನೆ ಕೃಪೆಯಾಗು ಇಂದೆನಗೆ ।
ಇಷ್ಟಲಿಂಗವ ಕೊಡು ಸ್ವಾಮಿ ॥

ಅಂದವಾಯಿತು ನೀ-ನಿಂದು ನುಡಿದ ನುಡಿ ।
ಚಂದ್ರಶೇಖರ ನಸುನಗುತ ಮತ್ತಿಂದ ॥
ತಂದಿರಿಸಿ ಪುಷ್ಪಫಲಗಳನು ॥೫

ನಿಂಬೆ ನೇರಿಲೆ ದಾ-ಳಿಂಬ ರುದ್ರಾಕ್ಷಿಯು ।
ತುಂಬಿದ ಮಾವು ನಾರಂಗಡಿಕೆಗೊನೆ ।
ಸಂಭ್ರಮದಿಂದೆ ಅನುಮಾಡಿ ॥೫

ಹತ್ತುಸಾವಿರ ಮಲ್ಲಿ-ತೆತ್ತಿಸಿ ವಿಸ್ತರದಿ ।
ಮತ್ತೆ ಮಲಕಿನ ಮಕರಗಳು ತೋರಣದಿ ।
ಕೆತ್ತಿ ಗುರುರಾಯ ಅನುವಾದ ॥೫

ಪಟ್ಟೆ ಪಟ್ಟಾವಳಿ-ಕಟ್ಟುವಣ್ಣದ ಸೀರೆ ।
ಕಟ್ಟಿದರಲ್ಲಿ ಎಸೆದವು ಕೈಲಾಸದ ।
ದೃಷ್ಟ ಸಿಂಹಾಸನದಂತೆ ॥೫

ಮುತ್ತಿನ ಗುಚ್ಛವು-ತೆತ್ತಿಸಿದ ಗದ್ದುಗೆಗೆ ।
ಮತ್ತೆ ನವರತ್ನ ಎಡೆಯೆಡೆಗೆ ಇಕ್ಕಿದ ।
ಮುತ್ತಿನ ಗದ್ದುಗೆಯನುವಾಗೆ ॥೬

ಇಕ್ಷು ಮೊದಲ ನಿಂಬೆ-ದ್ರಾಕ್ಷೆ ದಾಳಿಂಬವು ।
ಈಕ್ಷಿಸುವರಿಗೆ ಅನುವಾಗಿ ಮೇಲ್ಕಟ್ಟು ।
ಅಕ್ಷಮೂರನ ಕೃಪೆಯಿಂದ ॥೬

ಸಾಧಿಸಿ ಸುವರ್ಣದಿ-ವೇಧಿಸಿದ ಗದ್ದುಗೆಗೆ ।
ಮಾದೇವರೊಡೆಯ ಪ್ರಭುವೆಂಬ ಗುರುವೆಸೆದು ।
ಸಾಧುಸಜ್ಜನರ ಸಮಯದಲಿ ॥೬

ಪಾದಾರ್ಚನೆಯ ಮಾಡಿ-ಪಾದೋದಕವ ಕೊಂಡು ।
ಪಾದಪೂಜೆಗಳ ಅನುಮಾಡಿ ಶುದ್ಧ ಪ್ರ ।
ಸಾದವ ಲಿಂಗಕೆಡೆಮಾಡಿ ॥೬



ಜಂಗಮದ ಪಾದದ-ಉಂಗುಷ್ಠ ತೀರ್ಥವ ।
ಲಿಂಗಜಂಗಮಕೆ ಎಡೆಯಾಗಿ ಕಳೆದುಂಬಿ ।
ಮಂಗಳಾರತಿಯ ಬೆಳಗಿದರು ॥೬೪॥

ಚಂದ್ರಕಾಂತದ ಲಿಂಗ-ತಂದಭಿಷೇಕವ ಮಾಡಿ ।
ಗಂಧಪುಷ್ಪಗಳೆಡೆಯಾಗಿ ಅಕ್ಷತೆಯು ।
ಇಂದುಧರನಿಗೆ ಎಡೆಯಾಗಿ ॥೬೫॥

ಮಿಂದು ಮಡಿಯನುಟ್ಟು-ಹೊಂದಿ ಭಸಿತವಿಟ್ಟು ।
ಬಂದು ಶ್ರೀಗುರುವಿಗೆರಗಿದ ಮಧುವಯ್ಯ ।
ಮುಂದೆ ಕುಳ್ಳಿರ್ದ ಶುಭದಿಂದ ॥೬೬॥

ಧೃಡಭಕ್ತನ ಮನೆಯು ಮಡದಿ ಮಕ್ಕಳು ಸಹ ।
ಒಡೆಯಗೆ ಶರಣೆಂದು ಕುಳಿತು ಗುರುವಿನ ।
ಅಡಿಗೆ ವಂದಿಸಿ ಕರ ಮುಗಿದು ॥೬೭॥

ಗುರುರಾಯ ತನ್ನಯ-ಪರಮ ಸಂತೋಷದಿ ।
ಉರದಲ್ಲಿ ಲಿಂಗವ ಧರಿಸಿದ ಶರಣರ ।
ಹರುಷವೆ ಮೀರೆ ಮಿಗಿಲಾಗಿ ॥೬೮॥

ಲಿಂಗವ ಧರಿಸಿದ-ಮಂಗಳಾತ್ಮಕ ಗುರು ।
ಅಂಗದ ಪಾಪಕ್ಷಯವೆಂದು ಪ್ರಭುರಾಯ ।
ಸಂಗಮೇಶ್ವರನಮಗೆ ಕೊಟ್ಟ ॥೬೯॥

ಕರ್ಣ ಮಂತ್ರವ-ತುಂಬಿ-ಜೀರ್ಣಿಸಿ ಪೂರ್ವವ ।
ನಿರ್ಣಯ ಕರವ ಶಿರದಲ್ಲಿ ಇಟ್ಟಾಗ ।
ಪರ್ಣದುದಕವ ತಳೆದನು ॥೭೦॥

ನಿತ್ಯನಾಗಯ್ಯ ಮಗನೆ-ಭಕ್ತವತ್ಸಲನಾಗು ।
ಅತ್ಯಂತ ಭಾಗ್ಯ ನಿನಗೆಂದು ನೊಸಲಿಗೆ ।
ಕರ್ತ ಭಸಿತವನಿಟ್ಟ ಹರಿಸಿ ॥೭೧॥

ಗುರುವೆ ದೀಕ್ಷಾ ಗುರುವೆ-ಗುರುವೆ ಮೋಕ್ಷಾ ಗುರುವೆ ।
ಗುರುವೆ ಎನ್ನಯ ಸುರತರುವೆ ಮಧುವಯ್ಯ ।
ಹರುಷದಿ ಸಾಷ್ಟಾಂಗವೆರಗಿದ ॥೭೨॥

ಗಿಡಿಬಿಡಿ ತಮ್ಮಟೆ-ಹಾಡುವ ನಿಸ್ಸಾಳ ಭೇರಿ ।
ಪೊಡವಿಯುಲ್ಲದುರೆ ನಡುಗುತ ಮಧುವಯ್ಯ ।
ಪೊಡೆವಟ್ಟ ತನ್ನ ಗುರುವಿಗೆ

ಹೆಚ್ಚಾಗಿ ಮಗ ನಿನ-ಗಚ್ಚ ಪದವಾಗಲಿ ।
ಕಿಚ್ಚುಗಣ್ಣನ ಕರುಣದಲಿ ಬಾಳೆಂದು ।
ಬೆಚ್ಚಂತೆ ಹರಸಿ ಕಳುಹಿದ ॥೭

ಹತ್ತೆರಡು ಸಾವಿರ-ಸತ್ತಿಗೆ ನೆರೆದವು ।
ಮುತ್ತಿನಾರತಿ ತೆರೆಹಾಯಿಸಿ ರಶ್ಮಿಯು ।
ಒತ್ತಿನ ಸಿರಿಯು ಪೊಗಳುವರೆ ॥೭

ಚಿನ್ನದ ಅಣಸಿನ-ರನ್ನ ರತ್ನಗಳಿಟ್ಟು ।
ಚೆನ್ನ ಮುತ್ತಿನ ಸರವಿಟ್ಟು ದಂಡಿಗೆ ।
ಹನ್ನೆರಡು ಸಾವಿರ ನೆರೆದವು ॥೭

ಪಟ್ಟೊಳಿ ಸೀರಿಲಿ-ಕಟ್ಟಿ ಗುಡಿ ತೋರಣ ।
ಕಟ್ಟಳೆಯಿಲ್ಲ ಕಡೆಯಿಲ್ಲ ಕಲ್ಯಾಣ ।
ಪಟ್ಟಣವೆಲ್ಲ ಚೆರಗಾಗೆ ॥೭

ಹೊನ್ನ ಕಳಸವಿಟ್ಟು-ಚಿನ್ನದ ಹರಿವಾಣದಲಿ ।
ಕನ್ನೆ ವೆಣ್ಣುಗಳು ನೆರೆದೆಲ್ಲ ಹೊತ್ತರು ।
ಹನ್ನೆರಡು ನೂರು ಕಳಸವ ॥೭

ಹೆಂಡಿರು ಮಕ್ಕಳು-ಹಿಂಡು ಹರಿವಾಣದಲಿ ।
ಮಂಡಲ ಪತಿಯು ಭಸಿತವನು ಇಟ್ಟು ನಡೆ ।
ಗೊಂಡನು ಹರಳಯ್ಯನ ಮಠಕಾಗಿ ॥೭

ಉತ್ತಮಾಂಗದ ಮೇಲೆ-ಹೊತ್ತು ಚಮ್ಮಾವುಗೆಯು ।
ಸತ್ಯ ಹರಳಯ್ಯಗೆ ಶರಣೆಂದು ನಡೆದರು ।
ಈ ತೆರನ ಸಭೆ ಅರಿವಂತೆ ॥೮

ತರಳನಾತಗೆಮರುಳು-ಗೊಂಡನವನುಯೆಂದು ।
ದುರುಳ ವಿಪ್ರರು ನುಡಿದರು ಮಧುವಯ್ಯ ।
ಕರುಳನೆ ತೆಗೆವೆನೆನುತಿರ್ದ ॥೮



ಅಂತೆನಬಾರದು-ಇಂತೆನಬಾರದು ।
ಎಂತೆನಬಾರದೆನುತಲಿ ವಿಪ್ರರು ।
ಕೋಂತಗೊಂಡಂತೆ ನಡೆದರು ॥೮೨॥

ಅರ್ಥೈದೆಲ್ಲಿಯು ರಭಸ-ಘೋರ್ಗರೆವ ಕಹಳೆ ।
ಭೂರಿ ಕಿತ್ತಿರಿ ಮೊರೆದವು ಎತ್ತಣವೆಂದು ।
ಪುರಾರಿ ಶರಣ ಬೆಸಗೊಂಡ ॥೮೩॥

ಮಧುವರಸಯ್ಯನು-ಮುದದಿ ಲಿಂಗವ ಕಟ್ಟಿ ।
ಸದಮಲದಿಂದೆ ಒರುತಿಹನು ನಿಮ್ಮಯ ಪಾದಕೆ ।
ವಂದಿಸಲೆನುತಲಿ ॥೮೪॥

ಆಡಿ ತಪ್ಪುವನಲ್ಲ-ರೂಢಿಯೊಳು ಸಂಗಯ್ಯ ।
ಹೂಡಿದನೊಂದು ಕಥನವ ಕಲ್ಯಾಣಕೆ ।
ಕೇಡಿನ ಬೀಜ ಬರುತಿದೆ ॥೮೫॥

ಭವದೂರ ಹರಳಯ್ಯ-ಭವಕೆ ಚಿಂತಾಮಣಿಯು ।
ಭವ ಭಾರಿಗಳಿಗೆ ಅರಿ ನೀನು ಹರಳೈ ತಂದೆ ।
ಸೇವದಿಂದ ನಿಮಗೆ ನಮಿಸುವೆನು ೮೬

ಅಪರಾಧಿ ನಾನಯ್ಯ-ಅಪರಂಪರನು ನೀನು ।
ತ್ರಿಪುರ ಸಂಹರನ ಕರುಣದಲಿ ಹರಳೈ ತಂದೆ ।
ಕೃಪೆ ಮಾಡು ಮಗನಿಗೆ ದಯದಿ ॥೮೭॥

ಬಂದ ಕಾರಣವೇನು-ಇಂದು ನೀವು ಇಲ್ಲಿಗೆ ।
ಕುಂದು ಕುಲದವರ ಮನೆಗಾಗಿ ವಿಪ್ರರು ।
ಹೊಂದರು ಇಲ್ಲಿ ಹೊಲೆಯೆಂದು ॥೮೮॥

ತಪ್ಪ ತಲೆಯಲಿ ಹೊತ್ತು-ಥೊಪ್ಪಸನಾ ಬಂದೆ ।
ತಪ್ಪ ಬೆಣ್ಣೆಗೆ ಅಭಿಸಂಧುವಾದಂತೆ ।
ಹೆತ್ತವರ ಹಂಗ ಮೊರೆದೆನು ॥೮೯॥

ಏಳೇಳು ಮಧುವಯ್ಯ-ಭಾಳಲೋಚನ ನಿಮ್ಮ ।
ಕೊಳುಗೊಂಡನೆ ಉರದಲ್ಲಿ ಶಿವಭಕ್ತರ ।
ಆಳು ನಾನಯ್ಯ ಶರಣಾರ್ಥಿ ॥೯೦॥

ಎಂದ ಹರಳೈಯ್ಯಗೆ-ನಿಂದು ಮಧುವರಸಯ್ಯ ।
ಇಂದು ನಾ ನಿಮ್ಮ ಶರಣರ ಶಿಸುವೆಂದು ॥
ಮುಂದೆ ಮೆಯ್ಯಿಕ್ಕಿ ನಮಿಸಿದ

ಸೃಷ್ಟಿಗೆ ಸಂಗಯ್ಯ-ಕಟ್ಟಾಳು ಹರಳಯ್ಯ ।
ಮುಟ್ಟಿ ನಾ ನಿಮ್ಮ ಚರಣಕ್ಕೆ ಮಧುವರಸ ।
ಸಾಷ್ಟಾಂಗವೆರಗಿ ನಮಿಸುವೆ ॥

ತಂದೆನು ಮಗಳನು-ಇಂದು ನಿಮ್ಮಲ್ಲಿಗೆ ।
ಸಂದುದು ಎಂದು ಭಸಿತವನಿಟ್ಟರೆ ।
ಇಂದು ನಿಮ್ಮಡಿಗೆ ಎರಗುವೆ ॥

ಅಸಮಯದ ನಡೆಯಿದು-ಹೊಸ ಪರಿಯು ಲೋಕಕೆ ।
ವಿಸಮಯ ಬಹುದು ನಮಗೆಲ್ಲ ಬಿಜ್ಜಳ ।
ಮಸಗೆ ಕಲ್ಯಾಣ ಕೆಡುವುದು

ಭದ್ರಾವತಾರದ-ರುದ್ರಮೂರ್ತಿ ನೀನು ।
ಚಿದ್ರೂಪ ಶಿವನ ಶರಣನೆ ಹರಳೈ ತಂದೆ ॥
ಇದ್ದಹರು ನಿಮಗೆ ಸರಿಯಹರೆ

ಬೇಡ ಮಧುವರಸಯ್ಯ-ಕಾಡಾದಿರೆಮ್ಮನು ।
ನಾಡು ಬಿಜ್ಜಳನದು ಜಗವೆಲ್ಲ ಮೆಚ್ಚರು ।
ಮಾಡುವ ಕೆಲಸ ನಿನಗಲ್ಲ ॥

ನೇಮಿಸಿ ತಂದೆನು-ನೇಮದಿಂದಲಿ ಮಗಳ ।
ಸ್ವಾಮಿ ಕಪ್ಪಡಿಯ ಪುರದಯ್ಯನಾಣೆಂದು ।
ನೀ ಒಂದು ಮಾತ ನುಡಿದರೆ

ನೆಟ್ಟನೆ ಶಿವಯೆನುತ-ಕಟ್ಟಿದರು ಕಂಕಣವ ।
ಇಟ್ಟರು ಭಸಿತ ನೊಸಲಿಗೆ ಶರಣ ನೀ ।
ಮೆಟ್ಟೆಂದು ಜೋಡು ಚರಣವ ॥

ಹಿಂದಿನ ಪಾಪವು-ಹೊಂದಿದ ಫಲದಿಂದೆ ।
ಅಂದವಳಿಯಿತು ಭಯಗೊಂಡು ತಪ್ಪನು ।
ನಿಮ್ಮಿಂದ ಉದಕದಲಿ ಕಳೆದೆನು. ॥



ಮನ್ನಿಸಿ ತಂದೆನು-ನಿಮ್ಮಪಾದಕೆ ಮಗಳ ।
ಚನ್ನ ಕಪ್ಪಡಿಯ ಪುರದಯ್ಯನಾಣೆಂದು ।
ಇನ್ನೊಂದು ಮಾತ ನುಡಿದರೆ ॥೧೦೦॥

ಸಾಸಿರ ಗಣಂಗಳ-ಲೇಸಿನ ಮಗ ನಾನು ;
ದೇಶದೊಳೊಂದು ಹೊಸ ಪರಿಯಾಗಲಿ ಎಂದು ।
ಬಸವಣ್ಣನಾಣೆಂದು ನುಡಿದರೆ ॥೧೦೧॥

ಇನ್ನೇನು ಶಿವಾ ಎನುತ-ಸನ್ನೆಯ ಮದುವೆ ಇದು ।
ಪನ್ನಗಧರನ ಕಡೆಯಾಟ ಆಗಲಿಯೆಂದು ।
ಚನ್ನಾಗಲೆಂದು ಅರುಹಿದ ॥೧೦೨॥

ಒಂದಡಕೆ ಒಂದೆಲೆ-ತಂದು ಹರಿವಾಣದಲಿ ।
ತಂದು ಕನ್ನಿಕೆ ಕರದಲಿ ಇಟ್ಟರು ।
ಇಂದು ಈ ಹೆಣ್ಣು ನಿಮಗೆಂದು ॥೧೦೩॥

ಉಚ್ಚಹ ಕೇಳುತ-ಹೆಚ್ಚಿದ ಮಧುವಯ್ಯ ।
ಅಚ್ಚ ಮಹೇಶರಡಿಗಳಿಗೆ ಮಧುವರಸ ।
ಬೆಚ್ಚಂತೆ ಪಾದಕೆರಗಿದ ॥೧೦೪॥

ನಂದಿ ಕಲ್ಯಾಣಕೆ-ಬಂದ ಪ್ರಮಥರಿಗೆಲ್ಲ ।
ತಂದು ವೀಳೆಯ ನಡಿಸಿದರು ಮಧುವಯ್ಯ ।
ಬಂದುದು ನಮಗೆ ಕಡೆಯಾಟ ॥೧೦೫॥

ಸೇಸೆಯನಿಕ್ಕಿದರು-ಏನೊಂದು ನಾಮವ
ಏನೊಂದು ಪರಿಯ ನೆನೆವುತಲಿ ಮದಮಕ್ಕಳಿಗೆ ।
ಪ್ರಸಾಪವಿತ್ತರು ಕೈಗೂಡಿ ॥೧೦೬॥

ಶರಣಯ್ಯ ಶರಣಾರ್ಥಿ-ಶರಣು ಜಂಗಮಲಿಂಗ
ಶರಣು ನಿಮ್ಮಡಿಗೆ ಶರಣಾರ್ಥಿ ಎಂದೆನುತ ।
ಶರಣನ ಕಥೆ ಇದ ಕೇಳಿ ॥೧೦೭॥

ಸದಮಲ ಶರಣರ-ಪಾದವ ನೆನೆದು ನಾ ।
ಮುದದಿಂದೆ ಪದನ ನಡಿಸುವೆ ಇಲ್ಲಿಗೆ ।
ಪದೆದೆರಡು ಸಂಧಿ ಶರಣಾರ್ಥಿ ॥೧೦೮॥

---

## ೩ ನೆಯ ಸಂಧಿ.

ಸಂಗನ ಶರಣರ-ಅಂಘ್ರಿಯ ನೆನೆದು ।
ನಾ ಹಿಂಗದೆ ಪದನ ನಡಿಸುವೆ ಶರಣರ ;
ಮಂಗಳುತ್ಸವ ಹೊಗಳುವೆ ॥೧

ಎಲ್ಲೆಲ್ಲಿ ನೋಡಿದೊ-ಡಲ್ಲಿ ಮದುವೆಯ ಸುದ್ದಿ ।
ಅಲ್ಲದವರೆಡೆಗೆ ಮಗಳನು ಕೊಟ್ಟರು ।
ಕಲ್ಯಾಣ ಕೆಡುವುದೆನುತಲಿ ॥೨

ಪಟ್ಟಣದೊಳಗೆಲ್ಲ-ಹುಟ್ಟಿತು ಮದುವೆ ಸುದ್ದಿ ।
ಕೆಟ್ಟ ಕುಲದವರ ಮನೆಗಾಗಿ ವಿಪ್ರರು ।
ಕೊಟ್ಟರು ತಮ್ಮ ಮಗಳನು ॥೩

ಅಪರಾಧ ನಡೆಯಿತು-ವಿಪರೀತ ಬಂದಿದೆ ।
ತಪಸಿಗಳ ತಂಡ ಇರುವಲ್ಲಿ ಮಧುವರಸ ।
ಶ್ವಪಚರಿಗೆ ಹೆಣ್ಣ ಕೊಡಬಹುದೆ ॥೪

ಪಂಚ ಕಲ್ಯಾಣವು-ಮಿಂಚುಳ್ಳಬ್ಬಿನ ಧರ್ಮ ।
ಕೆಂಚ ಹಾರುವರು ಹೊಲೆಗೂಡಿದರೆಂದು ।
ಮಂಚಿ ಬಿಜ್ಜಳಗರುಹಿದನು ॥೫

ನೋಡಿರೆಲೆ ಜೀಯ್ಯ-ಕೇಡು ಪಟ್ಟಣದೊಳು ।
ಮೋಡಿ ಹಾರುವರು ಹೊಲೆಗೂಡಿ ಕೊಡುಕೊಳೆಯ ।
ಮಾಡಿದರಿಲ್ಲಿ ಇದ ಕೇಳಿ ॥೬

ಕರೆಯಿರೋ ಬಸವನ-ಅರಿಯ ಕೇಳಿದೆವೆಂದು ।
ಪುರಕೆ ಹೊಸತಹ ನುಡಿಗಳ ನಾವಿಲ್ಲಿ
ಇರಬಹುದೆ ನೇಮಿಮುನಿಗಳೇ ॥೭

ಅಣ್ಣಗಳ ಬಾಗಿಲ-ಬಣ್ಣದ ಚಾವಡಿ ।
ಹೆಣ್ಣೆನೋಲಗದ ಒಳಯಿಕೆ ಬಿಜ್ಜಳ ।
ಬಸವಣ್ಣನ ಬೇಗ ಕರಸಿದ ॥೮



ಅಕುಲಜರ ಮನೆಗೆ-ಉತ್ತಮ ಶೈವರು ।
ಹೆತ್ತ ಹೆಣ್ಣಗಳ ಕೊಡಬಹುದೆ ನಿಮ್ಮಲ್ಲಿ ।
ಮತ್ತೆ ನಾಸಿಕಕೆ ಕರವಿಟ್ಟ ॥೯॥

ಅವರು ಕೊಡಬಹುದು-ಇವರು ಕೊಳಬಹುದು ।
ಶಿವನಿಪ್ಪನಲ್ಲಿ ನೆಲೆಯಾಗಿ ಭೂಪತಿ ।
ಹವಣಗಾಣದಲೆ ನುಡಿವರೆ ॥೧೦॥

ಇಂತು ನಡೆವರಿಗೆ-ಎಂತು ದೀಕ್ಷೆಗಳೆಂತು ।
ಮಂತ್ರಿಯನರಸು ಬೆಸಗೊಂಡ ಕೋಪದಲಿ ।
ಮಂಥಣಿ ಶೂಲಕೆಳಸುವೆ ॥೧೧॥

ನಡೆ ನಿಮ್ಮ ಮಠಕಾಗಿ-ಹಿಡಿತನ್ನಿವರನು ।
ಕಡುಗಲಿ ಚರರು ಹರಿದರು ಹರಳಯ್ಯಗಳ ।
ಹಿಡಿತಂದರು ಪದ ನಡಿಸುವೆ ॥೧೨॥

ನುಡಿಯ ಮೀರಿದನಿವ-ಕಡೆಗಾಲ ಬಿಜ್ಜಳಗೆ ।
ಕಡು ಬೇಗ ಚನ್ನಣ್ಣಗರುಹೆಂದ ಕಪ್ಪಡಿಯ ।
ಮೃಡನ ಜಿಹ್ವೆಯಲಿಯಡಗುವೆ ॥೧೩॥

ಲೋಲ ಕರ್ಮದ ಗಂಡ-ಲೋಲ ಬಸವಣ್ಣನು ।
ಸಾಲೋಕ್ಯ ಪದಕೆ ನಡೆವುತಲಿ ಅಪ್ಪಣ್ಣ ।
ಕೇಳು ನೀಲಲೋಚನೆಗರುಹೆಂದ ॥೧೪॥

ಅಮ್ಮಾಜಿ ನೀ ಕೇಳು-ನಮ್ಮ ದಣ್ಣಾಯಕರು ।
ಉಮ್ಮಳದಿಂದ ತೆರಳಿದರು ಕಪ್ಪಡಿಗೆ ।
ನಿಮ್ಮ ಬೇಗದಲಿ ಬರಹೇಳಿ ॥೧೫॥

ರಂಗವೋಲೆಯ ನಿಕ್ಕಿ-ಅಂಗನೆ ನೀಲಮ್ಮ ।
ಗಂಗೆವಾಳುಕರ ನೆನೆವುತ ನಡೆಗೊಂಡು ।
ಶೃಂಗಾರ ರಂಗನೆ ಪತಿವ್ರತೆ ॥೧೬॥

ನಡೆಗೊಂಡು ಬೇಗದಿ ತಡವಿಲ್ಲದಾಕ್ಷಣ ।
ಒಡೆಯ ಕಪ್ಪಡಿಯ ಶಿವನೆಡೆಗೆ ತಾ ಬಂದು ।
ನುಡಿದಳೊಂದು ಮುದದಿಂದ ॥೧೭॥

ಬಂದ ಕಾರಣವೇ-ಇಂದು ದಣ್ಣಾಯಕರು ।
ಎಂದು ಅಪ್ಪಣ್ಣಗೆ ಬೆಸಗೊಳೆ ಕಪ್ಪಡಿಯು ।
ಇಂದುಧರನೊಳು ಕಥವಿದು ॥೧೮॥

ಹರ ಹರ ಎನುತಲಿ-ಬರೆದಳು ಪಂಚಾಕ್ಷರಿ ।
ಪಿರಿದು ಸಂಗಯ್ಯ ನಮಗೀತ ಎನುತಲಿ ।
ಉರದ ಲಿಂಗಯ್ಯಗೆ ನಮಿಸಿದಳು ॥೧೯॥

ಸೋಜಿಗವ ಕಂಡೆನು-ಮೂಜಗದೊಳಗೊಂದು ।
ರಾಜಮಂತ್ರಿ ಬಸವೇಶಗೆ ನೀಲಮ್ಮ ।
ಓಜೆಯುಲಿ ಕರವ ಮುಗಿದಳು ॥೨೦॥

ಅಚ್ಚರಿ ಕಂಡೆನು-ಖೇಚರ ಭೂಚರಕೆ ।
ಬಾಚಿರಾಜಯ್ಯ ಮಡಿವಾಳ ಮೋಳಿಗೆ ತಂದೆ ।
ಸಚರಾಚರಕೆಲ್ಲ ಹೊಸಪರಿಯು ॥೨೧॥

ಅರಿದು ನೀಲಮ್ಮನು-ಗರುವ ಗಂಭೀರ ತಾಯಿ ।
ಉರದ ಲಿಂಗವ ಕರದೆಡೆಗೆ ತಾ ಬಂದು ।
ಪುರಕೆ ಕೊಂಡೊಯ್ದ ನಲವಿಂದ ॥೨೨॥

ಉಭಯವ ಕಂಡನು-ಅಭಯವನಿತ್ತನು ।
ಪ್ರಭುದೇವರೆಂಬ ಸ್ವಯಂಜ್ಯೋತಿ ಕಪ್ಪಡಿಯ ।
ಅಭವನಿದ್ದೆಡೆಗೆ ನಡೆತಂದು ॥೨೩॥

ಹನ್ನೊಂದು ವಚನವ-ಚನ್ನಾಗಿ ಹೇಳಿದ ।
ಪನ್ನಗಧರನ ನುಡಿಗಳ ಅಲ್ಲೊಂದು ।
ಇನ್ನಾರಿಗರ್ಥ ತಿಳಿಯದು ॥೨೪॥

ಮೋಳಿಗಯ್ಯಗಳನು-ಹೇಳಲೆನ್ನಳವಲ್ಲ ।
ಫಾಳಲೋಚನನ ಭಜಕನ ಕರುಣವು ।
ಲೀಲೆಯಿಂದೆಮಗೆ ಇರಬೇಕು ॥೨೫॥

ನಮ್ಮ ಚನ್ನಣ್ಣನು-ನಿಮ್ಮ ಕೆಯ್ಯೊಳಗಿರಲಿ ।
ಬ್ರಹ್ಮಾಂಡಗಳಿಗೆ ಬಳಿಬಂದ ಆತನ ಮೇಲೆ ।
ನಿಮ್ಮ ಕರುಣವಿರಲೆಂದ ॥೨೬॥

The Vijay College
LIBRARY,
VIJAY COLLEGE
BIJAPUR



ಮುಂದಣ ಕಥನಕೆ ಒಂದು ಪರುಷ ನುಡಿ ।
ಇಂದೆಮಗೆ ನೀವು ಕುಡಬೇಕು ಕಪ್ಪಡಿಯು ।
ಇಂದುಧರನೊಳಗಾದ ಬಸವಣ್ಣಾ ॥೨೭॥

ಜ್ಯೋತಿ ಜ್ಯೋತಿ ಬೆಳಗ-ಜ್ಯೋತಿ ತಾ ನುಂಗಿತು ।
ಜ್ಯೋತಿ ಕರ್ಪುರದ ಇರವನು ಸಂಗಮನೊಳು ।
ನುತನು ಬಸವನಡಗಿದ ॥೨೮॥